ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 48 ನವೆಂಬರ್ 29, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಮಜ್ದೂರ್-ಕಿಸಾನ್ ದೆಹಲಿ ಚಲೋದತ್ತ ಪುಟ4-5
- ★ ರಾಜೀವ್‌ಗಾಂಧಿ ರಾಜೀನಾಮೆ ಒತ್ತಾಯಿಸಲು.........
- ★ ಕರ್ನಾಟಕದಿಂದ ಆಂಧ್ರವಲ್ಲಿ ಭಾರತ ಜಾಥ
- ★ ಎರಡನೇ ಚಾನೆಲ್ : ಸಮೂಹ ಮಾಧ್ಯಮಕ್ಕೆ ಬೇಕಾದ ತಿರುವು

ದೇಶ—ವಿದೇಶ ಪುಟ- 2
- ★ "ನಮ್ಮ ಸ್ವರ್ಗ ಭೂಮಿಯಲ್ಲೇ ಇದೆ"
- ★ ಅಮೇರಿಕಾದಿಂದ ಫಿಲಿಪೈನ್ಸ್‌ಗೆ ಇನ್ನಷ್ಟು ಶಸ್ತ್ರಾಸ್ತ್ರ
- ★ ಕೇಂದ್ರ ಮಂತ್ರಿ ಚಿದಂಬರಂ ತಿಣುಕಾಟ

ಮಜ್ದೂರ್ ಕಿಸಾನ್ ಜಾಥಾಗಳು ದೆಹಲಿಯತ್ತ ಪುಟ-6

ಈ ವಾರ ಮತ್ತಿತರ ಸುದ್ದಿಗಳು

ಬೆಂಗಳೂರಿನಲ್ಲಿ ಜಾಥಾಗಳ ಸಂಗಮ

"ಸಂಸತ್ತಿನೆದುರು ಹತ್ತು ಲಕ್ಷ ಕಂಠಗಳ ಕೂಗು ದೇಶಾದ್ಯಂತ ಪ್ರತಿಧ್ವನಿಸಲಿ"

ನವೆಂಬರ್ 20 ತ್ರಿವೇಂದ್ರಮ್‌ನಿಂದ ಹೊರಟ ದಕ್ಷಿಣ ಭಾರತದ ಜಾಥಾ ಬೆಂಗಳೂರಿಗೆ ತಲುಪಿದ ದಿನ. ಆ ದಿನವೇ ರಾಜ್ಯದ ನಾಲ್ಕು ಉಪ ಜಾಥಾಗಳು ಇದನ್ನು ಸೇರುವಯೋಜನೆ ಇತ್ತು. ಈ ಎಲ್ಲಾ ಜಾಥಾಗಳು ಸ್ವಾಗತ, ಮೆರವಣಿಗೆ, ಹಾಗೂ ಕಬ್ಬನ್ ಪಾರ್ಕ್‌ನಲ್ಲಿ ಸಭೆ ಏರ್ಪಡಿಸಲಾಗಿತು.

ಗುಲ್ಬರ್ಗ, ಸಿಂಧಗಿ, ಮಂಗಳೂರುಗಳಿಂದ ಹೊರಟ ಜಾಥಾಗಳು ತುಮಕೂರು ರಸ್ತೆಯ ಕಡೆಯಿಂದ ಯಶವಂತಪುರದ ಮೂಲಕ ಬೆಂಗಳೂರು ಪ್ರವೇಶಿಸಿದವು. ನಂಜನಗೂಡಿನಿಂದ ಹೊರಟ ಜಾಥಾ ಮೈಸೂರು ರಸ್ತೆಯಿಂದ ಬೆಂಗಳೂರು ಪ್ರವೇಶಿಸಿತು. ಎರಡೂ ಜಾಥಾಗಳಿಗೆ ಅಪೂರ್ವ ಸ್ವಾಗತ ನೀಡಲಾಯಿತು. ಉತ್ತರದ ಜಾಥಾಗಳು ಸೇರಿ ಯಶವಂತಪುರದಿಂದ ಕಬ್ಬನ್ ಪಾರ್ಕ್‌ನವರೆಗೆ ಮೆರವಣಿಗೆ ನಡೆಸಲಾಯಿತು. ಸುಮಾರು 3ರಿಂದ 4ಸಾವಿರ ಜನ ಮೆರವಣಿಗೆಯಲ್ಲಿಭಾಗವಹಿಸಿದರು. ದಾರಿಯುದ್ದಕ್ಕೂ ಎರಡೂ ಕಡೆ ಜಾಥಾ ನೋಡಲು ಜನ ಸೇರಿದ್ದರು. ಹಲವು ಕಡೆ ಜಾಥಾಕ್ಕೆ ಪ್ರೋತ್ಸಾಹ ನೀಡಿದ ಸಾಮೂಹಿಕ ಸಂಘಟನೆಗಳು ಅಭಿನಂದಿಸಿದವು. ಜಾಥಾ ಬೆಂಗಳೂರಿಗೆ ಆಗಮಿಸುವ ಒಂದು ವಾರದಿಂದ ಜಾಥಾಕ್ಕೆ ಸಮರ್ಥನೆ ನೀಡಿದ ಸಿ.ಪಿ.ಐ,ಸಿ.ಪಿ.ಐ.(ಎಂ), ಅವುಗಳ ನೇತೃತ್ವದ ಮತ್ತು ಇತರ ಸಾಮೂಹಿಕ ಸಂಘಟನೆಗಳು ಬೆಂಗಳೂರಲ್ಲಿ ಕಾರ್ಮಿಕರ, ದುಡಿಯುವ ಜನರ ಮಧ್ಯೆ ಪ್ರಚಾರ ಮಾಡಿದ್ದವು. ಜಾಥಾ ಬ್ಯಾಡ್ಜುಗಳ ಮಾರಾಟದ ಮೂಲಕ ಪ್ರಚಾರ, ನಿಧಿ ಸಂಗ್ರಹ ಮಾಡಿದ್ದವು.

ಕರ್ನಾಟಕದ ಎಲ್ಲಾ ಉಪ ಜಾಥಾಗಳು ಸೇರಿದಾಗ ಕಬ್ಬನ್ ಪಾರ್ಕ್ ಬಹಿರಂಗ ಸಭೆಯು ಆರಂಭವಾಯಿತು. ಪ್ರಾರಂಭದಲ್ಲಿ ನಾಲ್ಕು ಜಾಥಾಗಳಲ್ಲಿ ಮೊದಲಿಂದ ಕೊನೆಯವರೆಗೆ ಭಾಗವಹಿಸಿದ ರಾಜ್ಯ ನಾಯಕರನ್ನು ಸಭೆಗೆ ಪರಿಚಯಮಾಡಿಕೊಡಲಾಯಿತು ಬೆಳಗಿನಿಂದಲೂ ಅಂದು ಬೆಂಗಳೂರಿನ ಮೇಲೆ ಕಾರ್ಮೋಡ ಮುಸುಕಿತ್ತು. ಹಲವು ಕಡೆ ಬೆಳಿಗ್ಗೆ, ಮಧ್ಯಾಹ್ನವೇ ಜೋರಾಗಿ ಮಳೆ ಸುರಿದಿತ್ತು. ಆದರೂ ಕಬ್ಬನ್ ಪಾರ್ಕ್‌ನಲ್ಲಿ ಸಭೆಗೆ ದೊಡ್ಡ ಸಂಖ್ಯೆಯಲ್ಲಿ ಜನ ಹಾಜರಿದ್ದರು. ಸಭೆ ಆರಂಭವಾದ ಮೇಲೂ ಮಳೆ ಆಗಾಗ ಜೋರಾಗಿ ಸುರಿದರೂ,ಜನ ಕದಲಲಿಲ್ಲ. ಮರಗಳಡಿಯಲ್ಲಿ, ಜನ ನೆರೆದು ಸಭೆ ಮುಂದುವರಿಯಿತು. ಹಲವರು ಮಳೆಯನ್ನು ಲೆಕ್ಕಿಸದೆ ನಿಂತಲ್ಲಿಂದ ಕದಲಲಿಲ್ಲ.

ಮಳೆಯಿಂದಾಗಿ ರಾಜ್ಯ ಜಾಥಾ ನಾಯಕರು ಬಹಳ ಸಂಕ್ಷಿಪ್ತವಾಗಿ ತಮ್ಮ ಅನುಭವಗಳ ಬಗ್ಗೆ, ಜಾಥಾ ಉದ್ದೇಶಗಳ ಬಗ್ಗೆ ಹೇಳಿದರು. ಸಿ.ಪಿ.ಐ ಅಖಿಲ ಭಾರತ ನಾಯಕ ಕಾ. ದಾಜಿ ಜಾಥಾದ ಬಗ್ಗೆ ಮಾತನಾಡಿದರು. ಅವರು ಜಾಥಾವನ್ನು ಎರಡನೆಯ ಸ್ವಾತಂತ್ರ್ಯ ಸಮರವೆಂದರು. ಎಲ್ಲಾ ಕ್ಷೇತ್ರಗಳಲ್ಲೂ ರಾಜೀವ ಗಾಂಧಿಯ ವೈಫಲ್ಯಗಳನ್ನು ಸೋಲುಗಳನ್ನು ವಿವರಿಸಿ ಹೇಳಿ ಈ ಸರ್ಕಾರವನ್ನು ಕಿತ್ತೊಗೆಯಬೇಕೆಂದು ಕರೆ ನೀಡಿದರು. ದೇಶದ ಐಕ್ಯತೆ,ಸಮಗ್ರತೆಗೆ ಪಂಜಾಬ್‌ನಲ್ಲಿ 400 ಬಲಿದಾನಗಳನ್ನು ಆಗಲೇ ಸಲ್ಲಿಸಿರುವ ಎಡಡೂ ಕಮ್ಯುನಿಸ್ಟ್ ಪಕ್ಷಗಳು, ಅದರ ಸಾಮೂಹಿಕ ಸಂಘಟನೆಗಳು ಮಾತ್ರ ನಿಜವಾಗಿ ದೇಶದ ನಾಯಕತ್ವ ವಹಿಸಲುಯೋಗ್ಯರೆಂದರು. ಆ ಮೇಲೆ ಮಾತನಾಡಿದ ಕಾ.ಸಿ. ನಂಜುಂಡಪ್ಪನವರು ರಾಜ್ಯದ ರಾಜಕೀಯ ಪರಿಸ್ಥಿತಿ ವಿವರಿಸಿ, ಜನತಾ ಪಕ್ಷ ಇಂತಹ ಚಳುವಳಿಯಲ್ಲಿ ಭಾಗವಹಿಸದಿದ್ದುದನ್ನು ಖಂಡಿಸಿದರು. ಕಾಂಗ್ರೆಸ್(ಐ)ನ ಇಬ್ಬಂದಿ ನೀತಿಯನ್ನು ಬಯಲಿಗೆಳೆದರು.

ಅಷ್ಟು ಹೊತ್ತಿಗೆ ದಕ್ಷಿಣ ಭಾರತ ಜಾಥಾದ ನಾಯಕರನ್ನು ಹೊತ್ತ ಬಸ್ಸು ಕಬ್ಬನ್‌ಪಾರ್ಕ್ ತಲುಪಿತು.

(8ನೇ ಪುಟ ನೋಡಿ)

ಸೂಚನೆ

'ಅಕ್ಟೋಬರ್ ಕ್ರಾಂತಿ' ವಿಶೇಷಾಂಕ ಮುದ್ರಣಾಲಯ ತೊಂದರೆಯಿಂದಾಗಿ ಮುಂದಿನವಾರದ ಒಳಗೆ ಓದುಗರ ಕೈ ಸೇರಲಿದೆ. ಸುಧಾ, ಸೈಜ್‌ನಲ್ಲಿ ಆಫ್‌ಸೆಟ್ ಮುದ್ರಣದೊಂದಿಗೆ ಪ್ರಕಟಗೊಳ್ಳಲಿದೆ.

ಆಂದೋಲನ ಸಮಿತಿಯ ಕರೆ

ಜಾಥಾಗಳನ್ನು ಬೆಂಬಲಿಸಿ, ಸಂಸತ್ ಚಲೋಗೆ ಅಣಿಯಾಗಿ

ನಮ್ಮ ದೇಶವಿಂದು ಅತ್ಯಂತ ಗಂಭೀರ ಮತ್ತು ನಿರ್ಣಾಯಕವಾದ ಪರಿಸ್ಥಿತಿಯೊಂದನ್ನು ಹಾದು ಹೋಗುತ್ತಿದೆ. ಕೇಂದ್ರ ಸರಕಾರ ತನ್ನ ಜನ ವಿರೋಧಿ ಧೋರಣೆಗಳ ಮೂಲಕ ಜನರ ಬದುಕಿನ ಜೊತೆಗೆ ಚೆಲ್ಲಾಟ ನಡೆಸಿದೆ. ಫಲವಾಗಿ ಬೆಲೆಗಳು ಗಗನಕ್ಕೇರುತ್ತಿವೆ. ರೂಪಾಯಿಯ ಬೆಲೆ ಹತ್ತು ಪೈಸೆಗಿಂತಲೂ ಕೆಳಗೆ ಕುಸಿದು ಬದುಕು ದುರ್ಭರವಾಗುತ್ತಿದೆ. ಇಡೀ ದೇಶವನ್ನು ಆವರಿಸಿರುವಂತಹ ಸಾರ್ವಜನಿಕ ವಿತರಣ ಪದ್ಧತಿ ಇಲ್ಲದಿರುವುದರಿಂದಾಗಿ ಬಡಜನ ಕಾಳ ಸಂತೆಕೋರರ ಕಪಿಮುಷ್ಟಿಯಲ್ಲಿ ಸಿಕ್ಕು ಒದ್ದಾಡುತ್ತಿದ್ದಾರೆ. ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರೆಯುತ್ತಿಲ್ಲ. ಅನೇಕ ವೇಳೆ ಅವರು ಹತಾಶರಾಗಿ ತಮ್ಮ ಉತ್ಪನ್ನಗಳನ್ನು ತೀರಾ ಕಮ್ಮಿ ಬೆಲೆಗೆ ಮಾರಾಟ ಮಾಡಬೇಕಾದ ಅಸಹಾಯಕ ಪರಿಸ್ಥಿತಿಗಿಳಿದಿದ್ದಾರೆ.

ಒಂದು ಲಕ್ಷದ ಇಪ್ಪತ್ತು ಸಾವಿರ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದು ಸಾವಿರಾರು ಜನ ಉದ್ಯೋಗ ಕಳೆದುಕೊಂಡಿದ್ದಾರೆ. ಔದ್ಯಮಿಕ ಕ್ಷೇತ್ರದಲ್ಲಿ ಕೇಂದ್ರ ಸರಕಾರವು ತಳೆದಿರುವ ಸಡಿಲು ನೀತಿಯಿಂದಾಗಿ ನಮ್ಮ ವಿದೇಶೀ ಸಾಲದ ಹೊರೆ ಹೆಚ್ಚಾಗುತ್ತಿದೆ. ಈ ವರ್ಷ ನಿರ್ಯಾತಗಳಿಂದ ಗಳಿಸಿದ ವಿದೇಶೀ ವಿನಿಮಯದಲ್ಲಿ ಶೇ.24ದಷ್ಟು

(8ನೇ ಪುಟ ನೋಡಿ)

ಅಖಿಲ ಭಾರತ ಮಜ್ದೂರ್ ಕಿಸಾನ್ ಜಾಥಾ ಆಂದೋಲನ ಸಮಿತಿಯ ಸಂಯೋಜಕರಾದ ಹರ್‌ಕಿಶನ್‌ಸಿಂಗ್ ಸುರಜೀತ್ ಹಾಗೂ ಹೋಮಿದಾಜಿ ಜನತೆಯಲ್ಲಿ ಮಾಡಿಕೊಂಡಿರುವ ಮನವಿಯನ್ನು ಈ ಮುಂದೆ ಕೊಡಲಾಗಿದೆ.

ಶ್ರೀಲಂಕಾ : ಒಪ್ಪಂದದ ಶೀಘ್ರ ಅನುಷ್ಠಾನಕ್ಕೆ ಕರೆ

ಭಾರತ ಹಾಗೂ ಶ್ರೀಲಂಕಾ ಸರ್ಕಾರಗಳು ಜುಲೈ 29 ರಂದು ಸಹಿ ಹಾಕಿದ ಒಪ್ಪಂದನ್ನು ಸಿ.ಪಿ.ಐ(ಎಂ) ಹಾಗೂ ಸಿ.ಪಿ.ಐ. ಹಾಗೂ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷ ಸ್ವಾಗತಿಸಿ,ಬೆಂಬಲಿಸಿವೆ. ಇ.ಎಂ.ಎಸ್ ನಂಬೂದಿರಿಪಾದ್, ಸಿ.ರಾಜೇಶ್ವರರಾವ್ ಹಾಗೂ ಶ್ರೀಲಂಕಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಪೀಟರ್ ಕ್ಯೂಸಿಮನ್ ಒಂದು ಜಂಟಿ ಹೇಳಿಕೆ ನೀಡಿ ಈ ಒಪ್ಪಂದ ನಮ್ಮೆರಡು ದೇಶಗಳ ನಡುವಿನ ಪುರಾತನ ಗೆಳೆತನ ಹಾಗೂ ಸಹಕಾರದ ಸಂಬಂಧಗಳನ್ನು ಬಲಗೊಳಿಸುತ್ತದೆ, ಏಷ್ಯಾ-ಶಾಂತಿಸಾಗರ ಪ್ರದೇಶದಲ್ಲಿ ವಿಶೇಷವಾಗಿ ಹಿಂದೂಮಹಾಸಾಗರ ಕ್ಷೇತ್ರದಲ್ಲಿ ಶಾಂತಿ ಮತ್ತು ಭದ್ರತೆಯ ಆಂದೋಲನದ ಮುನ್ನಡೆಗೆ ನೆರವಾಗುತ್ತದೆ ಹಾಗೂ ಈ ಕ್ಷೇತ್ರದಲ್ಲಿ ಸಾಮ್ರಾಜ್ಯಶಾಹಿಗೆ ವಿರೋಧ ಮತ್ತು ಅಲಿಪ್ತ ನಿಲುವನ್ನು ಬಲಗೊಳಿಸುತ್ತದೆಂದು ಈ ಮೂವರು ಮುಖಂಡರು ಹೇಳಿದ್ದಾರೆ. ಈ ಒಪ್ಪಂದಕ್ಕೆಬೆಂಬಲವಾಗಿ ಹಾಗೂ ಅದರ ಶೀಘ್ರ ಅನುಷ್ಠಾನಕ್ಕಾಗಿ ಚಳುವಳಿಗಳನ್ನು ರೂಪಿಸಬೇಕೆಂದು ಎರಡೂ ದೇಶಗಳ ಪ್ರಗತಿಪರಶಕ್ತಿಗಳಿಗೆ ಅವರು ಕರೆ ನೀಡಿದ್ದಾರೆ.

ಜನತೆಯ ಬೇಡಿಕೆಗಳಿಗಾಗಿ ರಾಜೀವ್‌ಗಾಂಧಿ ಸರಕಾರದ

ರಾಜೀನಾಮೆಗಾಗಿ ಹೊಸ ಚುನಾವಣೆಗಾಗಿ

ಡಿಸೆಂಬರ್ 9 ರಂದು-ದೆಹಲಿ ಚಲೋ

“ನಮ್ಮ ಸ್ವರ್ಗ ಭೂಮಿಯಲ್ಲೇ ಇದೆ”

ನಿಕರಾಗುವಾದ ರಾಷ್ಟ್ರೀಯ ಅಭಿವೃದ್ಧಿ ಮತ್ತು ‘ಕಾಂಟ್ರಾ’ಗಳ ವಿರುದ್ಧ ಹೋರಾಟದಲ್ಲಿ ಅಲ್ಲಿನ ರೋಮನ್ ಕ್ಯಾಥೋಲಿಕ್ ಪಾದ್ರಿಗಳ ಪಾತ್ರವೂ ಮಹತ್ವ ಪೂರ್ಣವಾದದ್ದು. ಬಹುಸಂಖ್ಯಾತ ಕ್ಯಾಥೋಲಿಕ್ ಮತಾವಲಂಬಿಗಳೇ ಇರುವ ನಿಕರಾಗುವಾದಲ್ಲಿ ವಿಮೋಚನಾ ಆಧ್ಯಾತ್ಮವಾದಿಗಳು (ಲಿಬರೇಶನ್ ಥಿಯಾಲಜಿಸ್ಟ್) ಎಂಬ ಗುಂಪಿಗೆ ಸೇರಿದ ಪಾದ್ರಿಗಳು ರಾಷ್ಟ್ರದ ಸ್ವಾತಂತ್ರ್ಯ ರಕ್ಷಣೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಹೊಂಡುರಾಸ್‌ನಲ್ಲಿ 25 ವರ್ಷಗಳ ಕಾಲ ಪಾದ್ರಿಯಾಗಿದ್ದು 1979ರ ನಿಕರಾಗುವಾ ಕ್ರಾಂತಿಯ ಬಳಿಕ ಅಲ್ಲಿಗೆ ಬಂದ ಫಾದರ್ ಎನ್ರಿಕ್ ಕಸೋರ್ಲ್ ಇಂತಹ ಪಾದ್ರಿಗಳಲ್ಲಿ ಒಬ್ಬರು. ಇತ್ತೀಚೆಗೆ ನಿಕರಾಗುವಾ ಸಂದರ್ಶಿಸಿದ ಭಾರತದ ಪ್ರಸಿದ್ಧ ಸಾಕ್ಷ್ಯ ಚಿತ್ರ ನಿರ್ಮಾಪಕ ಆನಂದ ಪಟವರ್ಧನ್ ಅವರು ಫಾದರ್ ಎನ್ರಿಕ್ ಕಸೋರ್ಲ್ ಅವರೊಡನೆ ನಡೆಸಿದ ಕೆಲವು ಆಯ್ದ ಭಾಗಗಳು ಇಂತಿವೆ.

ಪ್ರಶ್ನೆ : ನೀವು ನಿಕರಾಗುವಾಕ್ಕೆ ಬಂದದ್ದು ಯಾವಾಗ ?

ಫಾದರ್ ಎನ್ರಿಕ್ : ನಿಕರಾಗುವಾ ಕ್ರಾಂತಿಯ ಬಳಿಕ 1979ರಲ್ಲಿ ಇಲ್ಲಿನ ಬಿಷಪ್ ಅವರ ಆದೇಶದಂತೆ ಕೇವಲ ಆರು ತಿಂಗಳ ಅವಧಿಗಾಗಿ ಬಂದೆ. ಇಲ್ಲಿನ ಕೆಲಸ ನನಗೆ ತುಂಬಾ ಹಿಡಿಸಿತು. ಹಾಗಾಗಿ ಇಲ್ಲೇ ಉಳಿದೆ.

ಪ್ರಶ್ನೆ : ಕ್ರಾಂತಿಗೆ ಮೊದಲು ಇಲ್ಲಿ ಬಹಳ ಮಂದಿ ದೊಡ್ಡ ಭೂಮಾಲೀಕರಿದ್ದರೆ ?

ಉತ್ತರ:ನಾನಿರುವ ಟೊಟೋಗಾಲ್ಪ ಪ್ರದೇಶದಲ್ಲಿ ಕೇವಲ ಇಬ್ಬರೇ ದೊಡ್ಡ ಭೂಮಾಲಕರಿದ್ದರು. ಇವರಲ್ಲಿ ಒಬ್ಬಾತ ಸೊಮೋಜಾ ಕುಟುಂಬಕ್ಕೆ ಸೇರಿದ್ದ. ಈ ನಗರ ಸಭಾ ಪ್ರದೇಶದ ಮೂರನೇ ಒಂದಂಶಕ್ಕೆ ಅವನೇ ಮಾಲೀಕ. ಇವನಿಗಿಂತ ತುಸು ಕಿರಿಯನಾದ ಇನ್ನೊಬ್ಬ ಭೂಮಾಲೀಕ ಉಳಿದ ಎಲ್ಲ ಫಲವತ್ತಾದ ಭೂಮಿಯನ್ನು ಹೊಂದಿದ್ದ. ಕ್ರಾಂತಿಯ ನಂತರ ಇವರ ಆಸ್ತಿಯನ್ನು ಮುಟ್ಟುಗೋಲು ಹಾಕಲಾಯಿತು.

ಪ್ರಶ್ನೆ: ಚಿಕ್ಕ ರೈತರಿಗೆ ಏನಾದರೂ ತೊಂದರೆ ಆಯಿತೆ ?

ಉತ್ತರ: ಸಣ್ಣ ಪ್ರಮಾಣದ ಹಿಡುವಳಿಗಳ ಮೇಲೆ ಸರಕಾರ ಯಾವ ಕಠಿಣ ಕ್ರಮವನ್ನು ಕೈಗೊಳ್ಳಲಿಲ್ಲ. ಅವು ಇನ್ನು ಹಿಂದಿನ ಒಡೆಯರ ಕೈಯ್ಯಲ್ಲೇ ಇವೆ. ಸೋಮೋಜಾ ಕುಟುಂಬ, ನ್ಯಾಶನಲ್ ಗಾರ್ಡ್‌ಗಳು ಮತ್ತು ಕೆಲವೊಮ್ಮೆ ಅತ್ಯಂತ ದೊಡ್ಡ ಭೂಮಾಲಕರ ಆಸ್ತಿಯನ್ನು ಮಾತ್ರ ವಶಪಡಿಸಿಕೊಳ್ಳಲಾಗಿದೆ.

ಪ್ರಶ್ನೆ: ಕಾಂಟ್ರಾಗಳು ಜನತೆಗಾಗಿ ಶ್ರಮಿಸಲು ಮುಂದೆ ಬರುವ ಡಾಕ್ಟರುಗಳನ್ನು, ಆರೋಗ್ಯ ಕಾರ್ಯಕರ್ತರನ್ನು ಅಧ್ಯಾಪಕರನ್ನು ಕೊಲೆಗೈಯ್ಯುತ್ತಿರುವುದುನಿಜವೇ ?

ಉತ್ತರ: ಖಂಡಿತವಾಗಿಯೂ ಹೌದು. 1983ರ ನಂತರ ಕ್ರಾಂಟ್ರಾಗಳ ಹಿಂಸಾತ್ಮಕ ಧಾಳಿಯಿಂದಾಗಿ ನಾವು ಅನೇಕ ಶಾಲೆಗಳಗಳನ್ನು ಮುಚ್ಚಬೇಕಾಯಿತು. ಸುಮಾರು 300 ಜನರನ್ನು ಕಾಂಟ್ರಾಗಳು ಅಪಹಸಿದ್ದಾರೆ.

ಪ್ರಶ್ನೆ: ನಿಮ್ಮ ಮೇಲೆ ವೈಯ್ಯುಕ್ತಿಕವಾಗಿ ಈ ವರೆಗೂ ಧಾಳಿ ನಡೆದಿಲ್ಲವೇ ?

ಉತ್ತರ:ಪಾದ್ರಿಗಳನ್ನು ಕೊಲ್ಲುವುದರಿಂದ ಕಾಂಟ್ರಾಗಳಿಗೆ ಹಾನಿಯೇ ಜಾಸ್ತಿ. ಇಷ್ಟಕ್ಕೂ ಕ್ರಾಂಟ್ರಾಗಳ ಪ್ರಚಾರ ಏನು ? ತಾವು ಕ್ರೈಸ್ತ ಧರ್ಮದ ರಕ್ಷಕರು ಮತ್ತು ಸಾಂಡಿನಿಸ್ಟಾಗಳೆಂದರೆ ಧರ್ಮವಿರೋಧಿಗಳಾದ ಕಮ್ಯುನಿಸ್ಟರೆಂದಲ್ಲವೆ ? ಹಾಗಾಗಿ ಬಹುಶಃ ನನ್ನನ್ನು ಬಿಟ್ಟಿದ್ದಾರೆ.

ಪ್ರಶ್ನೆ: ನಿಮಗೆ ಸಾಮಾಜಿಕ ನ್ಯಾಯದ ಬಗ್ಗೆ ಇರುವ ಕಳಕಳಿ ಮತ್ತು ಮಾರ್ಕ್ಸ್‌ವಾದದ ಕಡೆಗಿರುವ ಒಲವು ಹಾಗೂ ನಿಮ್ಮ ಸಂಪ್ರದಾಯ ಶರಣ ಚರ್ಚ್ ಇವೆರಡರ ನಡುವೆ ನೀವು ಹೇಗೆ ಸಾಮರಸ್ಯ ಸಾಧಿಸುತೀರಿ ?

ಉತ್ತರ: ನಮ್ಮ ವಿಮೋಚನಾ ಆಧ್ಯಾತ್ಮವಾದದಿಂದ ಚರ್ಚುಗಳಿಗೆ ಪ್ರಾಯಶಃ ಕಂಗಾಲಾಗಿದೆ. ಮನುಷ್ಯನನ್ನು ದೇವರು ತನ್ನ ಪ್ರತಿಬಿಂಬವಾಗಿ ಸೃಷ್ಟಿಸಿರುವುದೇ ನಿಜವಾದರೆ ಈ ಜಗತ್ತಿನಲ್ಲಿ ಇಷ್ಟೊಂದು ಜನ ದಟ್ಟ ದಾರಿದ್ರ್ಯದಲ್ಲಿ ನರಳುತ್ತಿರುವುದಕ್ಕೆ ಏನು ಅರ್ಥ ? ನಮ್ಮ ಸಂಪ್ರದಾಯ ಶರಣತೆ ತೊಲಗಬೇಕು. ವಿಮೋಚನಾ ಆಧ್ಯಾತ್ಮವಾದದ ಪ್ರಕಾರ ನಾವು ಕ್ರಿಸ್ತನ ಕತೆಯೆಂದರೆ ಕ್ರಾಂತಿಕಾರನ ಕತೆಯೆಂದು ಭಾವಿಸುತ್ತೇವೆ. ನಾವು ಸತ್ತ ಮೇಲೆ ಸ್ವರ್ಗ ಸೇರುವುದಕ್ಕಾಗಿ ಹೋರಾಟ ಮಾಡುತ್ತಿಲ್ಲ. ಈ ಜಗತ್ತಿನಲ್ಲೇ ನ್ಯಾಯಯುತವಾದ ಸಮಾಜವೊಂದರ ನಿರ್ಮಾಣಕ್ಕಾಗಿ ನಾವು ಶ್ರಮಿಸುತ್ತಿದ್ದೇವೆ. ನಮ್ಮ ಸ್ವರ್ಗ ಭೂಮಿಯಲ್ಲೇ ಇದೆ. ಇದು ನನ್ನ ವೈಯುಕ್ತಿಕ ನಂಬಿಕೆ ಕೂಡಾ.

○

ಅಣುಸುರಕ್ಷಿತೆಗಾಗಿ ಸೋವಿಯೆತ್ ಪ್ರಯತ್ನ

ಚೆರ್ನೋಬಿಲ್‌ನಲ್ಲಿ 1986ರಲ್ಲಿ ಸಂಭವಿಸಿದ ಅಣು ಶಕ್ತಿ ಅಪಘಾತದ ಬಳಿಕ ಸೋವಿಯೆತ್ ಒಕ್ಕೂಟವು ಅಣುಸ್ಥಾವರಗಳ ರಕ್ಷಣೆಗಾಗಿ ಇನ್ನಷ್ಟು ತೀವ್ರತರ ಕ್ರಮುಗಳನ್ನು ಕೈಗೊಳ್ಳಲಾರಂಭಿಸಿದೆ. ಸುರಕ್ಷಿತತೆಗಾಗಿ ಈವರೆಗೂ ವೆಚ್ಚಮಾಡಲಾಗುತಿದ್ದುದಕ್ಕಿಂತಲೂ ಸುಮಾರು ಐದು ಮಿಲಿಯ ಡಾಲರುಗಳಷ್ಟು ಹೆಚ್ಚು ಮೊತ್ತವನ್ನು ವ್ಯಯಿಸಿ ಪ್ರತಿಯೊಂದು ಅಣುಸ್ಥಾವರಕ್ಕೂ ಸುರಕ್ಷಾ ಸಾಧನೆಗಳನ್ನು ಅಳವಡಿಸಲಾಗಿದೆ. ಇನ್ನು ಮುಂದೆ ಸ್ಥಾಪಿಸಲಾಗುವ ಎಲ್ಲ ಅಣು ಸ್ಥಾವರಗಳಿಗೂ ದಪ್ಪನೆಯ ಕಾಂಕ್ರೀಟ್ ಕವಚಗಳನ್ನು ನಿರ್ಮಿಸಲಾಗುವುದೆಂದೂ ಸೋವಿಯೆತ್ ಅಧಿಕಾರಿಗಳು ಪ್ರಕಟಿಸಿದ್ದಾರೆ.

ತ್ರಿಪುರಾ : ಕೇಂದ್ರಮಂತ್ರಿ ಚಿದಂಬರಂ ಟೀಕಾಟ

ತ್ರಿಪುರಾದಸಿ ಪಿ.ಐ.(ಎಂ)ನ ನೇತೃತ್ವದ ರಾಜ್ಯ ಸರ್ಕಾರ ಟಿ.ಎನ್.ವಿ. ಉಗ್ರಗಾಮಿಗಳ ವಿರುದ್ಧ ದೃಢ ಕ್ರಮ ಕೈಗೊಳ್ಳುವ ದೃಢ ನಿರ್ಧಾರಹೊಂದಿಲ್ಲ ಎಂದು ಕೇಂದ್ರದ ಗೃಹರಾಜ್ಯಮಂತ್ರಿ ಚಿದಂಬರಂ ಅವರು ಸಂಸತ್ತಿನಲ್ಲಿ ನೀಡಿದ ಹೇಳಿಕೆ ಬಹಳ ಆಶ್ಚರ್ಯಕಾರಕ ಎಂದು ತ್ರಿಪುರಾ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಕಾಂಗ್ರೆಸ್(ಐ)-ಟಿ.ಯು.ಜೆ ಎಸ್‌ನ ಚುನಾವಣಾ ಮೈತ್ರಿ ಒಂದು ಅಪವಿತ್ರ ಮೈತ್ರಿ ಎಂದು ಬಯಲಿಗೆ ಬಂದಿರುವುದರಿಂದ ಕಾಂಗ್ರೆಸ್(ಐ)ಗೆ ರಾಜ್ಯದಲ್ಲಿ ನೈತಿಕ ಸ್ಥೈರ್ಯ ಮೂಡಿಸಲೆಂದು ಚಿದಂಬರಂ ರಾಜ್ಯಕ್ಕೆ ಭೇಟಿ ನೀಡಿ ಹೋದ ಮೇಲೆ ಈಹೇಳಿಕೆ ನೀಡಿದ್ದರು. ಟಿ.ಎನ್.ವಿ. ಕಾಂಗ್ರೆಸ್(ಐ)ನ ಚುನಾವಣಾ ಮಿತ್ರ ಟಿ.ಯು.ಜೆ,ಎಸ್.ನ ಶಿಶು ಎಂದು ಎಲ್ಲರಿಗೂ ತಿಳಿದವಿಷಯ.

ಕೇಂದ್ರ ಮಂತ್ರಿಗಳು ವಾಸ್ತವ ಸಂಗತಿಯನ್ನು ಕಾಣಲು ನಿರಾಕರಿಸುತ್ತಾರೆ ಎಂದು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುವ ಕಾಂ. ನೃಪೇನ್ ಚಕ್ರವರ್ತಿಯವರು ಕಳೆದ ಎರಡು ವರ್ಷಗಳಲ್ಲಿ 250 ಸಿ.ಪಿ.ಐ.(ಎಂ)ನ ಕಾರ್ಯಕರ್ತರು, ಮುಖಂಡರು, ಆದಿವಾಸಿಗಳು ಇತರರು ಕೊಲ್ಲಲ್ಪಟ್ಟದ್ದಾರೆ.ಆದರೆ ಟಿ.ಯು.ಜೆ.ಎಸ್.ನ ಒಬ್ಬರಾದರು ಬೆಂಬಲಿಗ ಟಿ.ಎನ್.ವಿ.ಹಲ್ಲೆಗಳಿಗೆ ಬಲಿಯಾಗಿದ್ದಾನೆಯೇ? ಎಂದು ಪ್ರಶ್ನಿಸಿ ಕಾಂಗ್ರೆಸ್(ಐ) ಮಿತ್ರ ಟಿ.ಯು.ಜೆ.ಎಸ್. ಲಪಿಯಾಚೆರಾದಲ್ಲಿ ಬಂಗಾಲಿಗಳ ಸಾಮೂಹಿಕ ಹತ್ಯೆಯಲ್ಲಿ ತೊಡಗಿದ್ದ ಸಂಗತಿಯನ್ನು ಮರೆಮಾಚಿ ಅಸಮರ್ಥನೀಯ ನಿಲುವನ್ನು ಸಮರ್ಥಿಸಿಕೊಳ್ಳುವವ್ಯರ್ಥಪ್ರಯತ್ನ ನಡೆಸಿದ್ದಾರೆಂದು ಚಿದಂಬರಂ ಹೇಳಿದ್ದಾರು.

ರಾಜ್ಯ ಸರ್ಕಾರ ಇನ್ನೊಂದು ಅರೆ-ಮಿಲಿಟರಿ ಪಡೆಯನ್ನು ಒಂದು ವರ್ಷದಿಂದಲೂ ಕೇಳುತ್ತಿದ್ದರೂ ಕೇಂದ್ರ ಸರ್ಕಾರ ಇದುವರೆಗೂ ನೀಡಿಲ್ಲ. ಕಾಂಗ್ರೆ.ಸ್(ಐ) ಆದಿವಾಸಿಗಳು ಹಾಗೂ ಇತರರ ನಡುವಿನ ಐಕ್ಯತೆ ರಕ್ಷಣೆಗಾಗಿ ಒಂದಾದರೂ ಸಭೆ ನಡೆಸಿಲ್ಲ. ಆದಿವಾಸಿಗಳಲ್ಲದವರಹತ್ಯೆಗಳು ಹೆಚ್ಚುತ್ತಿದ್ದರೂ ರಾಜ್ಯದಲ್ಲಿ ಈ ಎರಡು ಪಂಗಡಗಳ ನಡುವಿನ ಐಕ್ಯತೆ ಕಾಪಾಡಿಕೊಂಡು ಬಂದಿರುವುದು ಒಂದು ಸಾಮಾನ್ಯ ವಿಷಯವೇ ಎಂದು ಚಿದಂಬರಂರವರನ್ನು ಪ್ರಶ್ನಿಸಿರುವ ಕಾಂ.ನೃಪೇನ್‌ಚಕ್ರವರ್ತಿ ಕೇಂದ್ರ ಸರ್ಕಾರಕ್ಕೆ ಟಿ.ಎನ್.ವಿ. ಉಗ್ರಗಾಮಿಗಳನ್ನು ನಾಶಗೊಳಿಸುವ ರಾಜಕೀಯ ಸ್ಥೈರ್ಯ ಇಲ್ಲ ಎಂದು ಆಪಾದಿಸಿದ್ದಾರೆ.

●

ಅಮೇರಿಕಾದಿಂದ ಫಿಲಿಪೈನ್ಸ್‌ಗೆ ಇನ್ನಷ್ಟು ಶಸ್ತ್ರಾಸ್ತ್ರ

ಕಳೆದ ಆಗಸ್ಟ್ 28ರಂದು ವಿಫಲವಾದ ಮಿಲಿಟರಿ ಕ್ಷಿಪ್ರ ಕ್ರಾಂತಿಯ ಹಿನ್ನೆಲೆಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನವು ಫಿಲಿಪೈನ್ಸ್‌ಗೆ 35ಮಿಲಿಯ ಡಾಲರುಗಳಷ್ಟು ಮೊತ್ತದ ಗುಂಡು ಮದ್ದು, ಮೆಶಿನ್‌ಗನ್, ರೇಡಿಯೋ, ಟ್ರಕ್ಕುಗಳು ಮತ್ತಿತರ ಶಸ್ತ್ರಾಸ್ತ್ರ ಸಲಕರಣೆಗಳನ್ನು ರಫ್ತು ಮಾಡಲು ನಿರ್ಧರಿಸಿದೆ. ಈ ಹಣಕಾಸಿನ ವರ್ಷದಲ್ಲಿ ಈಗಾಗಲೇ ನೀಡಲು ತೀರ್ಮಾನಿಸಲಾಗಿರುವ 10 ಮಿಲಿಯ ಡಾಲರುಗಳಷ್ಟು ಮೊತ್ತದ ಶಸ್ತ್ರಾಸ್ತ್ರಗಳನ್ನು ಇದು ಒಳಗೊಂಡಿಲ್ಲ. ಫಿಲಿಪೈನ್ಸ್‌ನ ಎಂಭತ್ತಕ್ಕೂ ಮಿಕ್ಕಿದ ಪ್ರಜಾಸತ್ತಾತ್ಮಕ ಸಂಘಟನೆಗಳೂ, ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕ ವ್ಯಕ್ತಿಗಳು ತಮ್ಮ ರಾಷ್ಟ್ರವನ್ನು ಈ ರೀತಿ ಮಿಲಿಟರೀಕರಣಗೊಳಿಸುವುದರ ವಿರುದ್ಧ ಪ್ರತಿಭಟಿಸಿ ಹೋರಾಡಲು ನಿರ್ಧರಿಸಿದ್ದಾರೆ. ರಾಷ್ಟ್ರದ ಆಗುಹೋಗುಗಳಲ್ಲಿ ತೀವ್ರ ಬಲಪಂಥೀಯರು ಅಮೇರಿಕ ಸಾಮ್ರಾಜ್ಯಶಾಹಿಗಳ ಪ್ರಭಾವ ಹೆಚ್ಚುತ್ತಿರುವುದರ ವಿರುದ ಹೋರಾಡಲು ನಾಗರೀಕ ಹಕ್ಕುಗಳ ರಾಷ್ಟ್ರೀಯ ಹೋರಾಟ ಸಮಿತಿ ನಿರ್ಧರಿಸಿದೆ.

ಜಪಾನ್– ಮಿಲಿಟರಿವಾದದಪುನರುಜ್ಜೀವನ ?

ಅಮೇರಿಕದ ರಕ್ಷಣಾ ಖಾತೆಯ ತೀವ್ರ ಒತ್ತಡಗಳ ಪರಿಣಾಮವಾಗಿ ಜಪಾನ್ ಮತ್ತೊಮ್ಮೆ ಮಿಲಿಟರಿವಾದದ ಕಡೆಗೆ ವಾಲುತ್ತಿರುವುದೇ ? ಇತ್ತೀಚೆಗೆ ಜಪಾನ್ ಶಸ್ತ್ರಾಸ್ತ್ರಗಳ ಮೇಲೆ ಮಾಡುತ್ತಿರುವ ಅಪಾರ ವೆಚ್ಚದ ಪ್ರಮಾಣವನ್ನು ನೋಡಿದರೆ ಈ ಸಂಶಯಗಳು ನಿಜವೆನಿಸಲಾರಂಭಿಸಿವೆ. ಎರಡನೇ ಮಹಾ ಯುದ್ಧದ ಬಳಿಕ ಇದೀಗ ಮೊತ್ತಮೊದಲ ಬಾರಿಗೆ ಜಪಾನ್ ತನ್ನ ರಾಷ್ಟ್ರೀಯ ಆದಾಯದ ಶೇಡಾ ಒಂದರಷ್ಟು ಭಾಗವನ್ನು ‘ರಕ್ಷಣ ವೆಚ್ಚ’ ಗಳಿಗಾಗಿ ಖರ್ಚು ಮಾಡಲಿದೆಯಂತೆ.ಪೆಂಟಾಗನ್ ಮತ್ತು ಜಪಾನಿನ ರಕ್ಷಣಾ ಖಾತೆಯ ನಡುವೆ ನಡೆದ ಅನೇಕ ಸುತ್ತಿನ ಮಾತುಕತೆಗಳ ಬಳಿಕ ಇದೀಗ ಜಪಾನ್ ಎಫ್ 16 ಮಾದರಿಯ ಎಫ್.ಎಸ್.ಎಕ್ಸ್.ಎಂಬ ಯುದ್ಧ ವಿಮಾನಗಳನ್ನು ತಯಾರಿಸಲು ಮುಂದಾಗಿದೆ. ಎಫ್.ಎಸ್.ಎಕ್ಸ್. ಫೈಟರ್ ವಿಮಾನಗಳನ್ನು ಆಕ್ರಮಣಕ್ಕಾಗಿಯೇ ಬಳಸುವಂತೆ ರಚಿಸಲಾಗಿದೆ. ಶಸ್ತ್ರಾಸ್ತ್ರ ನಿರ್ಮಾಣದ ವಿರುದ್ಧ ಮತ್ತು ಶಸ್ತ್ರಗಳನ್ನು ಆಮದು ಮಾಡಿಕೊಳ್ಳುವ ಅಥವಾ ರಫ್ತು ಮಾಡುವ ವಿರುದ್ಧ ಜಪಾನಿ ಪಾರ್ಲಿಮೆಂಟು ಒಂದೊಮ್ಮೆ ಅಂಗೀಕರಿಸಿದ್ದ ನಿರ್ಣಯವನ್ನು ಪೇಲವಗೊಳಿಸಿ ಜಪಾನ್ ಸೈನಿಕ ಶಕ್ತಿಯಾಗಿ ಬೆಳೆಯುವ ದಿನ ದೂರವಿಲ್ಲ. ಇದು ವಿಶ್ವಶಾಂತಿಗೆ ಅಪಾಯಕಾರಿ.

ಸಂಕ್ಷಿಪ್ತ ಸುದ್ದಿಗಳು

“ಕೈಗಾರಿಕೆಗೆ ಮರಣದಂಡನೆ ವಿಧಿಸಲು ಬಿಡೆವು”

ಬೆಂಗಾಲ್ ಪೋಟರೀಸ್ ಏಷ್ಯಾದಲ್ಲೇ ಅತ್ಯಂತ ದೊಡ್ಡ ಪಿಂಗಾಣಿ ಕಾರ್ಖಾನೆ. ಅಂತರಾಷ್ಟ್ರೀಯ ಮಾರುಕಟ್ಟೆ ಇದಕ್ಕೆ ವಿಸ್ತರಿಸುತ್ತಿದ್ದು ಸಾಕಷ್ಟು ವಿದೇಶೀ ವಿನಿಮಯಗಳಿಸುತ್ತಿದ್ದ ಈ ಉದ್ದಿಮೆಯನ್ನು ಕೇಂದ್ರ ಸರ್ಕಾರ ಡಿನೋಟಿಫೈ ಮಾಡಿದೆ. ಇನ್ನೊಂದು ರಾಜ್ಯದಲ್ಲಿ ಬಿರ್ಲಾ ಗುಂಪಿಗೆ ಪಿಂಗಾಣಿ ಕಾರ್ಖಾನೆ ಆರಂಭಿಸಲು ಅವಕಾಶ ಮಾಡಿಕೊಡುವುದಕ್ಕಾಗಿ ಹೀಗೆ ಮಾಡಲಾಗಿದೆ. ಇದರಿಂದ ಬಂಗಾಳದ ಜನ ರೊಚ್ಚಿಗೆದಿದ್ದಾರೆ. ಎಡರಂಗದ ಆಳ್ವಿಕೆಯಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ಅಸ್ಥಿರಗೊಳಿಸುವ ಕೇಂದ್ರದ ಇಂತಹ ಪ್ರಯತ್ನಗಳನ್ನು ಬಲವಾಗಿ ಪ್ರತಿಭಟಿಸಿ ರಾಜ್ಯಾದ್ಯಂತ ಮತ ಪ್ರದರ್ಶನ, ಪ್ರಕ್ಷೋಭೆ ನಡೆದಿವೆ ನವಂಬರ್ 3ರಂದು ಈ ಕಾರ್ಖಾನೆಯ ಕಾರ್ಮಿಕರು ಡಿನೋಟಿಫಿಕೇಶನ್ನನ್ನು ತಿರಸ್ಕರಿಸಿ ಹೋರಾಡುವ ಪಣ ತೊಟ್ಟಿದ್ದಾರೆ. 32 ಕಾರ್ಮಿಕ ಸಂಘಗಳ ಕರೆಯ ಮೇರೆಗೆ ನಡೆದ ರ‍್ಯಾಲಿಯಲ್ಲಿ ಸಿ ಐ.ಟಿ.ಯು. ಮುಖಂಡರಲ್ಲದೆಇಂಟಕ್ ಹಾಗೂ ಹೆಚ್. ಎಮ್. ಎಸ್.ಮುಖಂಡರು ಪಾಲುಗೊಂಡರು.

ಹರ‍್ಯಾಣಾ : ಚುನಾವಣಾ ಆಯೋಗಕ್ಕೆ ಪ್ರತಿಭಟನೆ

ಫತೇಹಾಬಾದ್ ಅಸೆಂಬ್ಲಿ ಚುನಾವಣೆಯಲ್ಲಿ ಬಿ.ಜೆ ಪಿ.ಅಭ್ಯರ್ಥಿಯ ಪರವಾಗಿ ಲೋಕದಳದ ಬೆಂಬಲಿಗರು 17ಮತಗಟ್ಟೆಗಳನ್ನು ವಶಪಡಿಸಿಕೊಂಡು ತಮಗೆ ಬೇಕಾದಂತೆ ಮತ ಚಲಾಯಿಸಿದ್ದಾರೆ. ಆದ್ದರಿಂದ ಇಲ್ಲಿ ಮರು ಚುನಾವಣೆ ನಡೆಸಬೇಕೆಂದು ಚುನಾವಣಾ ದಿನದಂದು (ನವಂಬರ್ 8) ಈ ಚುನಾವಣಾ ಕ್ಷೇತ್ರದ ಪರಿಸ್ಥಿತಿಯನ್ನು ಕಣ್ಣಾರೆ ಕಂಡಿರುವ ಸಿ. ಪಿ. ಐ. (ಎಂ) ಎಂ.ಪಿ ಗಳಾದ ಕಾಂ.ರಾಮನಾರಾಯಣ್ ಗೋಸ್ವಾಮಿ ಹಾಗೂ ಕಾಂ.ಸತ್ಯಗೋಪಾಲ್‌ಮಿಶ್ರಾ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಮಧ್ಯಾಹ್ನ 12 ಗಂಟೆಯ ಮೇಲೆ ಲೋಕದಳ ಬೆಂಬಲಿಗರು ಮತಗಟ್ಟೆಗಳಿಗೆ ನುಗ್ಗಿ ಸುಳ್ಳು ಮತದಾನ ನಡೆಸಿದ್ದಾರೆ. ಹರ‍್ಯಾಣಾದ ಇಬ್ಬರು ಮಂತ್ರಿಗಳು ಹಾಗೂ ಒಬ್ಬ ಎಂ.ಎಲ್.ಎ ಕೂಡಾ ಇದರಲ್ಲಿ ಶಾಮೀಲಾಗಿರುವುದು ದುರದೃಷ್ಟಕರ ಎಂದು ಈ ಇಬ್ಬರು ಎಂ.ಪಿ.ಗಳು ಖೇದ ವ್ಯಕ್ತಪಡಿಸಿದ್ದಾರೆ. ಪೋಲೀಸರೂ ಈ ಪ್ರಜಾಪ್ರಭುತ್ವ-ವಿರೋಧಿ ಕೃತ್ಯಗಳಲ್ಲಿ ಶಾಮೀಲಾಗಿದ್ದರು.

ರೈತ-ಕಾರ್ಮಿಕರ ಜಾಥಾ ದೆಹಲಿಯತ್ತ ಹೊರಟಿವೆ........

ಡಿಸೆಂಬರ್ 9ರ 'ದೆಹಲಿ ಚಲೋ'ದ ಬೃಹತ್ ಕಾರ್ಯಕ್ರಮಕ್ಕೆ ಭಾರೀ ಸಿದ್ಧತೆ ಆರಂಭವಾಗಿದೆ. ದೇಶದ ದುಡಿಯುವ ಜನಗಳ ಒತ್ತಾಯಗಳನ್ನು ಕಾಂಗ್ರೆಸ್(ಐ) ಆಡಳಿತಗಾರರ ಕಿವಿಗಳವರೆಗೆ ತಲುಪಿಸಲು, ದೇಶದ ಮುಂದೆ ಪರ್ಯಾಯ ಜನಪರ ಧೋರಣೆಗಳನ್ನೂ ಮಂಡಿಸುತ್ತಾ, ಆರು ಜಾಥಾಗಳು ದೇಶದ ಆರು ಮೂಲೆಗಳಿಂದ ದೆಹಲಿಯತ್ತ ಪ್ರಯಾಣ ಆರಂಭಿಸಿವೆ.

ಮೊದಲ ಜಾಥಾ ಕೇರಳದ ರಾಜಧಾನಿ ತಿರುವನಂತಪುರದಿಂದ ನವಂಬರ್ 11ರಂದು ದೆಹಲಿಯತ್ತ ಹೊರಟಿತು. ನವಂಬರ್ 10ರಂದು ನಡೆದ ಭಾರೀ ಸಭೆಯೊಂದರಲ್ಲಿ ಎಡ ಪ್ರಜಾಪ್ರಭುತ್ವ ರಂಗದ ಸಂಯೋಜಕ ಸಮಿತಿಯ ಸಂಯೋಜಕರಾದ ಸಿ.ಪಿ.ಐ (ಎಂ) ಮುಖಂಡ ಎಂ.ಎಂ.ಲಾರೆನ್ಸ್ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪಿ.ಭಾಸ್ಕರನ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಇದರ ಮುಖಂಡರು ಜಾಥಾದ ಬಗ್ಗೆ, ಪರ್ಯಾಯ ಧೋರಣೆಗಳ ಬಗ್ಗೆ ಮಾತನಾಡಿದರು. ಸಿ.ಐ.ಟಿ.ಯು. ಕಾರ್ಯಕರ್ತ ಕೆ. ಎನ್. ರವೀಂದ್ರನಾಥ ಜಾಥಾಕ್ಯಾಪ್ಟನ್ ಸಿ.ಕೆ.ಚಂದ್ರಪ್ಪನ್ ಹಾಗೂ ಸೋಮ ಶೇಖರ ನಾಯರ್ ಜಾಥಾದ ನೇತೃತ್ವವಹಿಸಿದ್ದಾರೆ. ಒಂದು ಹಾಡಿನ ತಂಡವೂ ಜಾಥಾದ ಜತೆಗಿದೆ.

ನವಂಬರ್ 10ರಂದೇ ಕೇರಳದಿಂದ ಎರಡು ಉಪ ಜಾಥಾಗಳು ಅನುಕ್ರಮ ಪಟಣಂತಿತ್ತ ಮತ್ತು ಕಾಸರಗೋಡಿನಿಂದ ಆರಂಭವಾಗಿ ಮುಖ್ಯ ಜಾಥಾದ ಮಾರ್ಗದಲ್ಲಿಲ್ಲದ ಜಿಲ್ಲೆಗಳ ಮೂಲಕ ಹಾದು ತ್ರಿಚೂರ್ ಮತ್ತು ಪಾಲ್ಘಾಟ್‌ನಲ್ಲಿ ಮುಖ್ಯ ಜಾಥಾದೊಂದಿಗೆ ಸೇರಿಕೊಂಡವು.

ಈ ಜಾಥಾ 16ರಂದು ತಮಿಳು ನಾಡು ಪ್ರವೇಶಿಸಿತು. ಕೊಯಮತ್ತೂರು, ತಿರುಪುರ, ಈರೋಡ್, ಸೇಲಂ, ಧರ್ಮಪುರಿ ಮೂಲಕ ಕರ್ನಾಟಕ ಸೇರಿತು.

ಮುಂಬೈಯಿಂದ ಹೊರಟ ಜಾಥಾ

ನವಂಬರ್

ಬಾಂಬೆ ಜಾಥ

23	ಬಾಂಬೆ ಬಿಡುವುದು ಥಾಣ, ಭಿವಂಡಿ, ಶಹಾಪುರ ತಂಗುವುದು
24	ಐಗತಾಪುರಿ, ಟ್ರಂಬಕ್ ನಾಸಿಕ್, ಮತಿಗೊಹನ್ ತಂಗುವುದು.
25	ಮನಮಾಡ್, ನಂದಗೋನ್, ಔರಂಗಾಬಾದ್ ತಂಗುವುದು,
26	ಜಾಲನ ತಂಗುವುದು
27	ಜಾಲಗೋನ ತಂಗುವುದು
28	ಅಮಲ್‌ನೀರ್, ದೂಲೇ ತಂಗುವುದು
29	ಇಂದೂರ್ ರಾತ್ರಿ ತಂಗುವುದು
30	ನಾಗದಾ, ಉಜ್ಜೈನಿ ತಂಗುವುದು
ಡಿಸೆಂಬರ್	
1	ದೇವಸ, ಅಶಾಟ, ಸಿಹೋರೆ ಭೂಪಾಲ್ ತಂಗುವುದು
2	ವಿದೀಶಾ, ಗಂಜಿಬಸೋಡಾ, ಗುನಾ, ತಂಗುವುದು
3	ಶಿವಪುರಿ, ಮೋಹನಾ, ಗ್ವಾಲಿಯರ್ ತಂಗುವುದು
4	ಜೋಹರ, ಕೈಲಾವಾಸ್, ಸಬಲ್‌ಘರ್ ತಂಗುವುದು
5	ಅಂಬಾ, ಪೊರೆಶಾ, ಮೋರೆನಾ ತಂಗುವುದು
6	ಆಗ್ರಾ ತಂಗುವುದು
ಉ.ಪ್ರದೇಶ ಪ್ರವೇಶ	
7	ಫರೀದಾಬಾದ್
8	ದೆಹಲಿ

ಒಂದು ಅಪೂರ್ವ ಅನುಭವ

ದೆಹಲಿಗೆ ಹೊರಟಿರುವ 6 ಜಾತಾಗಳಲ್ಲಿ ಒಂದಾದ ಟ್ರಿವೆಂಡ್ರಮ್ ಜಾಥಾ ಕರ್ನಾಟಕದ ಹೊಸೂರು ಮೂಲಕ ಹಾದು ಹೋಗುವ ಸಂದರ್ಭದಲ್ಲಿ ಅದನ್ನು ಸ್ವಾಗತಿಸಲು ರಾಜ್ಯದಲ್ಲಿ ಅಪೂರ್ವ ಸಿದ್ಧತೆ. ಸಿ.ಪಿ.ಐ.(ಎಂ), ಸಿ.ಪಿ.ಐ. ಪಕ್ಷಗಳ ನೇತೃತ್ವದಲ್ಲಿ 12 ಸಾಮೂಹಿಕ ಸಂಘಟನೆಗಳ ಆಶ್ರಯದಲ್ಲಿ 4 ಉಪ ಜಾಥಾಗಳನ್ನು ರಾಜ್ಯದ ಗುಲ್ಬರ್ಗ, ಬಿಜಾಪುರ, ಮಂಗಳೂರು ಹಾಗು ಮೈಸೂರುಗಳಿಂದ ಹೊರಡಿಸಲು ನಿರ್ಧಾರ.

ನವೆಂಬರ್ 14 ರಂದು ಸಂಜೆ ಬಿಜಾಪುರದ ಬಸವೇಶ್ವರ ಸರ್ಕಲ್ ಬಳಿ ಭಾರೀ ಬಹಿರಂಗ ಸಭೆಯೊಂದಿಗೆ ಜಾಥಾ ಕಾರ್ಯಕ್ರಮ ಆರಂಭವಾಯಿತು. 15ರಂದು ಬೆಳಿಗ್ಗೆ ಸಾಮೂಹಿಕ ಸಂಘಟನೆಗಳ ಧ್ವಜಗಳಿಂದ ಅಲಂಕೃತವಾದ ಜಾಥ ಘೋಷಣೆಯ ಫಲಕವನ್ನೊತ್ತ ಟೆಂಪೋ ತನ್ನ ಪ್ರಯಾಣವನ್ನು ಆರಂಭಿಸಿತು.

ಡಿಸೆಂಬರ್ 20 ರವರೆಗೆ ನಡೆದ ಜಾಥಾ ನನಗೆ ಹಾಗೂ ನಮ್ಮ ತಂಡಕ್ಕೆ ಅಪೂರ್ವ ಅನುಭವ ನೀಡಿತು. ದೇಶದ ಇಂದಿನ ಪರಿಸ್ಥಿತಿ ಬಗ್ಗೆ ಜನರ ನಾಡಿ ಮಿಡಿತ ಅರಿಯಲು ಇದೊಂದು ಅವಕಾಶವಾಯಿತು. ಮಜ್ದೂರ್-ಕಿಸಾನ್ ಜಾಥಾಕ್ಕೆ ಜನ ಎಲ್ಲೆಡೆಯಲ್ಲೂ ಉತ್ಸಾಹದ ಸ್ವಾಗತ ನೀಡಿದರು. ನಾಯಕರುಗಳ ಮಾತನ್ನು ಗಂಭೀರವಾಗಿ ಆಲಿಸಿ ಪ್ರತಿಕ್ರಿಯೆಸುತ್ತಿದ್ದರು. ಈಗಿನ ಸರಕಾರ ಅಧಿಕಾರ ರೂಢವಾಗುವಾಗ ಇದ್ದ ಆಶಯ ಆ ಸರಕಾರವನ್ನು ಚುನಾಯಿಸಿದ ಮುಖದಲ್ಲೇ ಕಾಣುತ್ತಿರಲಿಲ್ಲ. ಸಾಮಾನ್ಯ ಜನರ ಬದುಕು ಅಸಾಧ್ಯವಾಗಿದ್ದು, ಸಮಸ್ಯೆಗಳ ಮಹಾಪೂರವೇ ಅವರನ್ನು ಅವುಚಿಕೊಂಡಂತೆ ಅವುಗಳು ಅವರ ಮುಖದಲ್ಲಿ ಹೆಪ್ಪುಗಟ್ಟಿದ್ದವು ಒಂದಿಷ್ಟು ಮಳೆ ಬಿದ್ದು ವಾತಾವರಣ ತಿಳಿಯಾಗಿದ್ದರೂ, ಅಷ್ಟು-ಇಷ್ಟು ಬೆಳೆ ದಕ್ಕಬಹುದಾಗಿದ್ದರೂ-ಬೆಳೆದ ಬೆಳೆಗೆ ಬೆಲೆ ಕಾಣದ ರೈತ, ಮುಂಜಾನೆಯಿಂದ ಸಂಜೆವರೆಗೂ ಪರರ ಸಿರಿತನಕ್ಕಾಗಿ ಕನಿಷ್ಟ ಕೂಲಿಯನ್ನು ಪಡೆಯದ ದುಡಿಯಬೇಕಾದ (ಕೆಲವು ಪ್ರದೇಶಗಳಲ್ಲಿ ಈಗಲೂ ರೂ. 3,4 ಕೂಲಿ ಕೊಡುತ್ತಿರುವುದು ತಿಳಿದು ಬಂತು) ಕೃಷಿ ಕೂಲಿಗಾರರು, ಭವಿಷ್ಯ ರೂಪಿಸುವ ಯಾವ ಭರವಸೆಯನ್ನು ನೀಡದಂತಹ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿ ಸಮುದಾಯ, ಉದ್ಯೋಗವಿಲ್ಲದೆ ಹತಾಶಗೊಂಡಿರುವ ಯುವಜನ ಸಮೂಹ, ನವುರಾದ ಶೋಷಣೆಗೆ ಪಕ್ಕಾಗಿ ಬದುಕಿನ ಎಲ್ಲಾ ಸುಖಗಳನ್ನು ಮರೆತಿರುವ ಸ್ತ್ರೀ ಸಮೂಹ ತಮ್ಮದೇ ಆದ ರೀತಿಯಲ್ಲಿ ಜಾಥವನ್ನು ಸ್ವೀಕರಿಸುತ್ತಿರು ಪ್ರತಿಕ್ರಿಯಿಸುತ್ತಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿಹೋರಾಡಿದ ಹಿರಿಯ ಜನತೆ ಅಂದಿನ ತಮ್ಮ ಕನಸ್ಸನ್ನು ಪೂರ್ಣ ಮರೆತಂತಿದರು.40 ವರ್ಷಗಳ ಸ್ವತಂತ್ರ ಭಾರತ ಅವರನೀರಿಕ್ಷೆಗಳನ್ನು ಹುಸಿಗೊಳಿಸಿದೆ. ಭೂಮಾಲಕ-ಬಂಡವಾಳಶಾಹಿ ಆಡಳಿತ ತನ್ನ ವಿಫಲತೆಯ ತುತ್ತ ತುದಿಯಲ್ಲಿದ್ದು ಅದರ ಮುಖಂಡತ್ವದಲ್ಲಿ ಈಗ ರಾಜೀವ್ ಗಾಂಧಿ ಕುಳಿತ್ತಿದ್ದಾರೆ.

ಭೂಮಾಲಕ ಬಂಡವಾಳಶಾಹಿ ಆಡಳಿತವಿರುವ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳು, ಚಲಾಯಿಸಲ್ಪಡುವ ಮತಗಳು ಆಳುವ ವರ್ಗದ ಅಧಿಕಾರ ಗಟ್ಟಿಗೊಳಿಸಿದವೇ ವಿನಾ: ಘೋಷಣೆಗಳು ಹೊರಬಂದವೇ ವಿನಾ: ಜನ ಕಲ್ಯಾಣ ಕೆಲಸಗಳು ನಡೆಯಲಿಲ್ಲ. ಜಾಥದ ಟೆಂಪೋ ಬಂದಾಗ ಸಂಘಟಿತವಾದ-ಪ್ರಜ್ಞಾವಂತ ಜನವರ್ಗ ನಾಳಿನ ಖಾತರಿಯ ಆಶಯವನ್ನೊತ್ತ ಜಾಥಾ ಇದೆಂದು ಸ್ವಾಗತಿಸಿದರೆ ಉಳಿದವರು ತೀರಾ ಅನುಮಾನಗಳಿಂದಲೇ ಮೊದ ಮೊದಲಿಗೆ ಪ್ರತಿಕ್ರಿಯಿಸುತ್ತಿದ್ದರು. ಜಾಥಾದ ಮುಖಂಡರ ಮಾತುಗಳನ್ನು ಆಲಿಸುತ್ತಿದ್ದಂತೆಯೇ-ತಮ್ಮ ಸಮಸ್ಯೆಯ ಬಗ್ಗೆಯೇ ಇವರು ಮಾತನಾಡುತ್ತಿದ್ದಾರೆಂದು ಅರಿತ ನಂತರ ಜಾಥಾ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಜಾಥ 17 ಬೇಡಿಕೆಗಳಿಗೆ ಪೂರ್ಣ ಸಹಮತ ವ್ಯಕ್ತಪಡಿಸುತ್ತಾ, ಅದ ಪ್ರಾಮಾಣಿಕ ಉದ್ದೇಶಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು.

18ರಂದು ನಮಗೊಂದು ವಿಶಿಷ್ಟ ಅನುಭವವಾಯಿತು. ಅಂದು ಜಾಥಾ ಹಾವೇರಿಯನ್ನು ಪ್ರವೇಶಿಸಿತು. ಅಲ್ಲಿ ನಮ್ಮನ್ನು ಸ್ವಾಗತಿಸಿದವರು-ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಅಂದಿನ ಫಾರ್‌ವರ್ಡ್ ಬ್ಲಾಕ್‌ನ ಮುಖಂಡರೂ ಆಗಿದ್ದ ಪಂಚಾಕ್ಷರಿ ಒಳಸಂಗದ ಅವರು. ಭೂಮಾಲಕ ಪಕ್ಷಗಳ ರಾಜಕೀಯದಿಂದ ತುಂಬಾ ನೊಂದಿರುವ ಇವರು ಈಗ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರಾಗಿದ್ದಾರೆ. ನೇತಾಜಿ ಸುಭಾಶ್ ಚಂದ್ರ ಭೋಸ್, ಎ.ಕೆ.ಗೋಪಾಲನ್ ರವರುಗಳು ಹಾವೇರಿಗೆ ಭೇಟಿ ನೀಡಿದ್ದಾಗ ಅವರೊಂದಿಗೆ ಮಾತನಾಡಿದ ದಿನಗಳನ್ನು ನೆನಪಿಸಿಕೊಂಡರು. ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಹೊಸ ಮನೆ ಸಿದ್ದಪ್ಪರವರು ಕಮ್ಯುನಿಸ್ಟ್ ಚಳುವಳಿ ಬಲಗೊಂಡಲ್ಲಿ ಮಾತ್ರ ನಾಡಿನ ಜನತೆಯ ಅಭ್ಯುದಯ ಸಾಧ್ಯವೆಂದು ಅವರು ನಂಬಿದ್ದರೆಂದು ತಿಳಿಸಿದರು. ಪೂಜಾರಿಯ ಸಾಲವೇಳ ಜನರನ್ನು ದಿಕ್ಕೆಡಿಸುತ್ತಿದೆ. ದಿವಾಳಿಗೈಯುತ್ತಿದೆ. ಜನತೆ ಭಿಕ್ಷುಕರೆಂದು ಅವರು ಬಗೆದಂತಿದೆ ಎಂದು ಆವೇಶದಿಂದ ಮಾತನಾಡಿದ ಅವರು ಕುಟುಂಬ ಯೋಜನಾ ಶಸ್ತ್ರ ಕ್ರಿಯೆ ಮಾಡಿಸಿದರೆ ಸಾಲ ಸಿಗುವುದೆಂದು ಜನತೆಗೆ ಒಪ್ಪಿಸಿ ನರ ತುಂಡರಿಸಿಕೊಂಡವರಿಗೂ ಸಾಲ ಕೊಡದಿರುವ ಅವಮಾನವೀಯ ಸ್ಥಿತಿ ನಿರ್ಮಾಣವಾಗಿದೆ. ಎಂದು ಅತ್ಯಂತ ದುಃಖದಿಂದ ಕೇಳದಾಗ ಸಭೆ ದಂಗಾಯಿತು. ರೈತ ಹೋರಾಟದ ಹಾಡನ್ನು ಹಾಡಿದರು. ಇವರ ಸ್ಪರ್ಧಿಯುವಕರನ್ನು ನಾಚಿಸುವಂತದ್ದು. ಇಲ್ಲಿ ಇದೇ ರೀತಿಯ ಇನ್ನೊಂದು ಅನುಭವ ನಮಗಾಯಿತು. ಸಭೆ ಮುಗಿಯುವುದನ್ನೇ ಕಾದುಕೊಂಡಿದ್ದ ಮಹಿಳಾ ಕೃಷಿ ಕೂಲಿಗಾರರು ಟೆಂಪೋ ಹತ್ತುತ್ತಿದ್ದ ನಾಯಕರುಗಳ ಧಾಳಿ ಧಾವಿಸಿ ಬಂದರು. ಮನ ಮಿಡಿಯುವ ಮಾತ ನಾಡಿದರು. "ಸತ್ತವರಿಗೆ ಭೂಮಿ ಸಿಕ್ಕಿದರೂ ಬದುಕಿರುವ ನಮಗೆ ಭೂಮಿ ಇಲ್ಲ ಸ್ವಾಮಿ" ಎಂದು ದುಃಖದಿಂದ ಹೇಳಿದರು. ಅವರ ಹೇಳಿಕೆಯಲ್ಲಿ ಅಪಾರ ನೋವಿತ್ತು. ಕಳೆದ 15-20 ವರ್ಷಗಳಿಂದ ಉಳುಮೆ ಮಾಡುತ್ತಿರುವ ತಮ್ಮನ್ನು ತಮ್ಮ ಭೂಮಿಯಿಂದಲೇ ಓಡಿಸುತ್ತಿದ್ದಾರೆಂದು ಅಳಲು ತೋಡಿಕೊಂಡರು. ಹಲವಾರು ಮನವಿಗಳನ್ನೇ ಸಭೆಗೆ ತಂದುಕೊಟ್ಟರು. ಇದರ ಹಿಂದಿನ ಊರಾದ ನಾಗನೂರಿನಲ್ಲಿ ಜಾಥಾಕ್ಕೆ ಹಾರ್ದಿಕ ಸ್ವಾಗತ ಮಾಡಿದ ರೈತರು "ಕರ್ನಾಟಕ ಪ್ರೊವಿನ್ಸಿಯಲ್ ಕಿಸಾನ್ ಸಭಾ" ಎಂಬ ಹೆಸರಿನಲ್ಲಿ ತುಂಬಾ ಹಿಂದಿನಿಂದ ರೈತ ಸಂಘಟನೆ ನಡೆಸುತ್ತಿದ್ದಾರೆ. "85 ಹೆಬ್ಬೆಟ್ಟುಗಳನ್ನೊಳಗೊಂಡ ಸ್ವಾಗತ ಪತ್ರವನ್ನು" ನೀಡಿದ ಇವರು ತಮ್ಮ ಒಳಿತಿಗಾಗಿ ಜಾಥಾ ಬಂದಿದೆ ಎಂದು ಪತ್ರದಲ್ಲಿ ತಿಳಿಸಿದ್ದರು.

19 ರಂದು ಹಿರಿಯೂರಿಗೆ ಬಂದರೆ ಇಲ್ಲಿನ ದೃಶ್ಯ ಮನಕರಗಿಸಿತು. ವಾಣಿ ವಿಲಾಸ್ ಸಕ್ಕರೆ ಕಾರ್ಖಾನೆ ಕಳೆದ ಒಂದೆರಡು ವರ್ಷಗಳಿಂದ ಮುಚ್ಚಲ್ಪಟ್ಟದೆ. ಮಾಲಿಕನ ಹಿತಕ್ಕೆ ಕಾರ್ಮಿಕರ ಹಿತ ಇಲ್ಲಿ ಬಲಿ ಹೋಗಿದೆ. ನೂರಾರು ಕಾರ್ಮಿಕರು, ಅವರ ಕುಟುಂಬ ಬೀದಿಪಾಲಾಗಿದೆ. ಸರಕಾರ ತೀರಾ ಬೇಜವಾಬ್ಧಾರಿತನ ಪ್ರದರ್ಶಿಸುತ್ತಿದೆ. ಗಂಜಿಗೂ ಪರದಾಡಬೇಕಾದ ಸುಮಾರು 50 ಪುಟಾಣಿ ಕಂದಮ್ಮಗಳು ತಮ್ಮ ಹಸಿದ ಮುಖಗಳೊಂದಿಗೆ ಜಾಥಾವನ್ನು ಸ್ವಾಗತಿಸಿದರು. ತಮ್ಮ ಅಳಲನ್ನು ತೋಡಿಕೊಂಡಾಗ ಕ್ರೂರ ವ್ಯವಸ್ಥೆಯ ಉಗ್ರ ರೂಪದ ದರ್ಶನವಾಯಿತು.

ನಾಗನೂರಿನಲ್ಲಿ ಇನ್ನೊಂದು ಅನುಭವ. ಜಾಥಾ ಬರುತ್ತಿದ್ದಂತೆಯೇ ಅಲ್ಲಿ ಹಸಿರು ಬಾವುಟ ಬ್ಯಾನರ್‌ಗಳು ನಮ್ಮನ್ನು ಸ್ವಾಗತಿಸುತ್ತಿವೆ ! ನಮಗೆ ಆಶ್ಚರ್ಯ. ಹತ್ತಿರ ಹೋಗಿ ನೋಡಿದರೆ ಆ ಹಸಿರಿನ ಒಳಗಡೆ ಕುಡುಗೋಲು ಸುತ್ತಿಗೆ ಚಿಹ್ನೆಯಿದೆ !

ಮಲಪ್ರಭಾ ನದಿ ಆಶ್ರಯದ ಪ್ರದೇಶಗಳಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಕಪ್ಪಣ್ಣನವರ್ ಜಾಥಾಕ್ಕೆ ಉತ್ತಮ ಸ್ವಾಗತ ವ್ಯವಸ್ಥೆ ಮಾಡಿದ್ದರು. ರಾಮದುರ್ಗ ತಲುಪಿದಾಗ ಅಲ್ಲಿ ಕುಲಕರ್ಣಿಯವರ ಭೇಟಿ ಜಾಥಾ 1 ಗಂಟೆ ತಡವಾಗಿ ಇಲ್ಲಿ ತಲುಪಿದಾಗ ಕಾಂ|| ಕುಲಕರ್ಣಿಯವರಿಗೆ ಆತಂಕ. ಹಿಂದೆ ಐಕ್ಯರಂಗ ಪತ್ರಿಕೆಗಾಗಿ ಬೆಂಗಳೂರಿನಲ್ಲಿ ದುಡಿಯುತ್ತಿದ್ದ ಕುಲಕರ್ಣಿಯವರು ಈಗ ರೈತ ಸಂಘಟನೆಯ ನೇತೃತ್ವ ಇಲ್ಲಿ ವಹಿಸಿದ್ದಾರೆ. ಉತ್ಸಾಹಿ ಯುವ ಗೆಳೆಯರನ್ನು ಹೊಂದಿದ್ದು ತುಂಬಾ ಸ್ಫೂರ್ತಿಯಿಂದ ಕೆಲಸ ನಿರ್ವಹಿಸುತ್ತಿದ್ದಾರೆ. "ಹಿಂದೆ ರಾಜನ ವಿರುದ್ಧ ನರಗುಂದದ ಜನ ಇಲ್ಲಿ ಬಂಡೆದ್ದು ರಾಜನನ್ನೇ ಓಡಿಸಿ ಗದ್ದುಗೆ ಹಿಡಿದಿದ್ದರು. ಒಂಡಾಯ ಮೆದಿದ್ದರು. ಆ ಘಟನೆ ನಡೆದು ಈಗ ನೂರುವರ್ಷ ನಡೆಯುತ್ತಿದೆ. ಉತ್ಸಾಹದಿಂದ ಆ ದಿನಾಚರಣೆಯನ್ನು ಆಚರಿಸಬೇಕು. ರಾಜನಿಗಾಗಿ ಗುಲಾಮರಂತೆ ನಮ್ಮ ತಂದೆ ತಾಯಿ ಹಿರಿಯರು ದುಡಿದಿದ್ದಾರೆ. ಕೂಲಿ ಕೂಡ ಇವರಿಗೆ ದಕ್ಕಿಲ್ಲ. ಬಡ್ಡಿ ಸಹಿತ ವಸೂಲಿ ಮಾಡಬೇಕು" ಎಂದು ದೃಢವಾಗಿ ಹೇಳಿದರು.

ಹೀಗೆ ಅನುಭವ ಹೇಳುತ್ತಾ ಹೋದರೆ ದೀರ್ಘವಾಗುತ್ತದೆ. ಪುಟಗಳ ಪರಿಮಿತಿ ಮೀರುತ್ತದೆ.

ಅಂತೂ ಜಾಥಾ ಒಂದು ಅಪೂರ್ವ ಅನುಭವ. ಜನರೊಂದಿಗೆ ಬೆರೆಯಲು, ಅದರಿಂದ ಕಲಿಯಲು ಒಂದು ಉತ್ತಮ ಅವಕಾಶ. ಅವರು ಬದಲಾವಣೆ ನಿರೀಕ್ಷಿಸುತ್ತಿದ್ದಾರೆ. ಅವರಿಗೆ ಅಂತಹ ಪ್ರಾಮಾಣಿಕ ಪಕ್ಷ ಸಂಘಟನೆ ಬೇಕಾಗಿದೆ. ನಾಯಕತ್ವ ನೀಡಿದರೆ ದೊಡ್ಡ ರೀತಿಯಲ್ಲಿ ಅಣಿ ನೆರೆಯಲು-ಹೋರಾಡಲು ಇವರು ಸಿದ್ಧರಾಗಲಿದ್ದಾರೆ. ಆದರೆ ಇವರೊಂದಿಗೆ ನಾವು ಇರಬೇಕಾಗಿದೆ. ನಮ್ಮ ಜಾಥಾದ ಆಶಯಗಳು ಇವರ ಮನೆ-ಮನ ತುಂಬಾ ಬೇಕಾಗಿದೆ. (6ನೇ ಪುಟ ನೋಡಿ)

ರಾಜೀವ್‌ಗಾಂಧಿ ರಾಜಿನಾಮೆ ಒತ್ತಾಯಿಸಲು....

ದಿನಾಂಕ 15-11-1987 ರಂದು ಬಿಜಾಪುರ ಜಿಲ್ಲೆಯ ಸಿಂಧಗಿಯಿಂದ ಹೊರಟ ಕರ್ನಾಟಕ ರಾಜ್ಯ ಮಜ್ದೂರ್-ಕಿಸಾನ್ ಉಪ ಜಾಥಾ ದಿನಾಂಕ 17-11-1987 ರಂದು ಧಾರವಾಡ ಜಿಲ್ಲೆಯ ನರಗುಂದದ ದಾರಿಯಾಗಿ, ಸಂಜೆ ಹುಬ್ಬಳ್ಳಿಯ ಮಹಾನಗರಕ್ಕೆ ಆಗಮಿಸಿತು. ಅಖಿಲ ಭಾರತ ದಕ್ಷಿಣ ವಲಯದ ಮಜ್ದೂರ್-ಕಿಸಾನ್ ಜಾಥಾವನ್ನು ದಿನಾಂಕ 20-11-87 ರಂದು ಬೆಂಗಳೂರಿನಲ್ಲಿ ಎದುರುಗೊಳ್ಳಲು ಹೊರಟಿರುವ ಉಪ ಜಾಥಾವನ್ನು ಮಹಾನಗರದ ಪ್ರದೇಶದಲ್ಲಿರುವ ಕೇಶವಾಪುರದಲ್ಲಿಯೇ ಸಿ. ಪಿ. ಐ., ಮತ್ತು ಸಿ.ಪಿ.ಐ. (ಎಂ) ಪಕ್ಷಗಳ ನೇತೃತ್ವದಲ್ಲಿರುವ ಕಾರ್ಮಿಕ, ರೈತ, ವಿದ್ಯಾರ್ಥಿ ಯುವಜನ, ಮತ್ತಿತರ ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳೂ ಕೆಲವು ಸ್ವಯಂ ಸೇವಕರ ತಂಡವೂ ಅಧಿಕ ಸಂಖ್ಯೆಯಲ್ಲಿ ಹಾರ್ದಿಕವಾಗಿ ಸ್ವಾಗತಿಸಿದರು. ಉಪ ಜಾಥಾವು ಹಾಡು, ಘೋಷಣೆ, ಕೈಭಿತ್ತಿ ಪತ್ರ, ಬ್ಯಾನರ್‌ಗಳೊಂದಿಗೆ ನೂರಾರು ಜನರೊಡನೆ ನಗರದ ಅತಿ ಮುಖ್ಯ ಕೇಂದ್ರವಾದ ಈದ್ಗಾ ಮೈದಾನಿಗೆ ಬಂದಿತು. ಅಲ್ಲಿ ಅತ್ಯಾಕರ್ಷಕವಾಗಿ ಸುಸಜ್ಜಿತವಾದ ವೇದಿಕೆಯಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಉಪ ಜಾಥಾ ತಂಡವು ದಾರಿಯುದ್ದಕ್ಕೂ ಅಭೂತಪೂರ್ವ ಸ್ವಾಗತ ಪಡೆಯುತ್ತಾ ಬಂದುದರಿಂದ, ಹುಬ್ಬಳ್ಳಿ ನಗರಕ್ಕೆ ತಲುಪುವಾಗ ರಾತ್ರಿ ಗಂಟೆ 9 ಆಗಿದ್ದರೂ, ಬಹಿರಂಗ ಸಭೆಗೆ ಸಾಮೂಹಿಕ ಸಂಘಟನೆಗಳ ಮಹಿಳೆಯರೂ ಸೇರಿ ಬಹು ಸಂಖ್ಯೆಯಲ್ಲಿ ಬಂದಿದ್ದರು; ಸಾರ್ವಜನಿಕರೂ ಸಾಕಷ್ಟು ಹಾಜರಿದ್ದರು. ಎ.ಐ.ಟಿ.ಯು.ಸಿ. ಯ ರಾಜ್ಯ ಉಪಾಧ್ಯಕ್ಷರಾದ ಡಾ|| ಎ. ಜೆ. ಮುಧೋಳ್ ಅಧ್ಯಕ್ಷತೆ ವಹಿಸಿದ್ದರು.

ಸಿ.ಐ.ಟಿ.ಯು.ವಿನ ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಕಾ.ವಿ.ಜೆ.ಕೆ. ನಾಯರ್ ಪ್ರಾರಂಭದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಜಾಥಾದ ಉದ್ದೇಶಗಳನ್ನೂ, ಮುಖ್ಯ ಬೇಡಿಕೆಗಳನ್ನೂ ವಿವರಿಸಿ ತಿಳಿಸಿದರು. ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯಿಂದಾಗಿ ಉಂಟಾದ ತೀವ್ರ ದುಃಸ್ಥಿತಿಯನ್ನು ವಿಶ್ಲೇಶಿಸುತ್ತಾ, ನಿರುದ್ಯೋಗಸ್ಥರಿಗೆ ಭತ್ತೆ ನೀಡಬೇಕೆಂದೂ, ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕೆಂದೂ, ಮುಚ್ಚಿದ ಕಾರ್ಖಾನೆಗಳನ್ನು ಕೂಡಲೇ ತೆರೆಯಬೇಕೆಂದೂ ಒತ್ತಾಯಿಸಿದರು. ರಾಜ್ಯ ವಿಧಾನ ಸಭೆಯ ಸಿ ಪಿ.ಐ. ಸದಸ್ಯರಾದ ಕಾ· ಎಂ.ಎಸ್.ಕೃಷ್ಣನ್ ಅವರು ಕೋಮುವಾದ, ಪ್ರತ್ಯೇಕತವಾದ, ಮೂಲಭೂತವಾದ, ಭಾಷಾವಾದ, ಜಾತೀವಾದ ಮುಂತಾದ ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧ ರೈತರು-ಕಾರ್ಮಿಕರು ಸಂಘಟಿತರಾಗಿ ಹೋರಾಡಲು ಕರೆಯಿತ್ತರು. ರಾಜ್ಯ ಸಿ.ಐ.ಟಿ.ಯು.ವಿನ ಖಜಾಂಚಿಯವರಾದ ಕಾ. ಎನ್.ಕೆ. ಉಪಾಧ್ಯಾಯರು ಮಾತನಾಡುತ್ತಾ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಜ್ದೂರ್-ರೈತ ಮುಂತಾದ ದುಡಿಯುವ ಜನ ಕೋಟಿ ತ್ಯಾಗ ಬಲಿದಾನಗಳಿಂದ ವಿರೋಚಿತ ಐಕ್ಯ ಹೋರಾಟ ನಡೆಸಿದುದನ್ನು ನೆನಪಿಸಿದರು. ಅದೇ ರೀತಿ ದೇಶದಲ್ಲಿ ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಎಡ- ಪ್ರಜಾಪ್ರಭುತ್ವ - ಜಾತ್ಯಾತೀತ ಪರ್ಯಾಯ ಶಕ್ತಿ ಅಧಿಕಾರಕ್ಕೆ ಬರಲು, ಶೋಷಣಾರಹಿತ ಸಮಾಜ ಸ್ಥಾಪಿಸಲು, ಆರ್ಥಿಕ ಸ್ವಾತಂತ್ರ್ಯ ಗಳಿಸಲು ಎಲ್ಲಾ ಜನವರ್ಗ ಹೆಚ್ಚಿನ ರಾಜಕೀಯ ಪ್ರಜ್ಞೆಯಿಂದ ಸಂಘಟಿತ ಹೋರಾಟ ನಡೆಸಬೇಕೆಂದರು. ದೇಶಾದ್ಯಂತ ಒಂದು ತಿಂಗಳ ಅವಧಿಯಲ್ಲಿ ನಡೆಯುತ್ತಿರುವ ಮಜ್ದೂರ್-ಕಿಸಾನ್ ಜಾಥಾ ಹಾಗೂ ಡಿಸೆಂಬರ್ 9, 1987 ರಂದು ದೆಹಲಿಯಲ್ಲಿ ನಡೆಯಲಿರುವ ಲಕ್ಷಾಂತರ ಜನರ ಬೃಹತ್ ಮತಪ್ರದರ್ಶನವು ರಾಜೀವ ಗಾಂಧಿ ಸರಕಾರ ರಾಜೀನಾಮೆ ಕೊಡಬೇಕೆಂದೂ, ಲೋಕಸಭೆಗೆ ಮರುಚುನಾವಣೆ ನಡೆಸಬೇಕೆಂದೂ ಒತ್ತಾಯಿಸಲಿಕ್ಕಾಗಿದೆ ಎಂದರು. ದೆಹಲಿಯ ಕೆಂಪು ಕೋಟೆಯಲ್ಲಿ ಶ್ರಮಿಕ ವರ್ಗದ ಕೆಂಬಾವುಟ ಹಾರುವದಿನ ಸಮೀಪಿಸಲಿ ಎಂದು ಆವೇಶಪೂರ್ವಕವಾಗಿ ಹಾರೈಸಿದರು.

ಕಾ. ಭೀಮಸೀ ಕಲಾದ್ಗಿಯವರು ರೈತಸಂಘದವರಾಗಿಯೂ, ಕಾ. ಜಯಕುಮಾರ್, ಡಿ. ವೈ. ಎಫ್. ಐ. ಪರವಾಗಿಯೂ, ಕಾ.ಸಿದ್ದನಗೌಡಪಾಟೀಲ್ ಎ. ಐ. ಎಸ್. ಎಫ್. ಪರವಾಗಿಯೂ, ಕಾ. ವೈ. ಕೃಷ್ಣವೇಣಿಸಿ, ಸಿ. ಪಿ. ಐ. ಪರವಾಗಿಯೂ ಮಾತನಾಡಿದರು.

ಹುಬ್ಬಳ್ಳಿ ನಗರದಲ್ಲಿ ದಿನಾಂಕ 17ರ ಪೂರ್ವದಲ್ಲಿ ಸಾಮೂಹಿಕ ಸಂಘಟನೆಗಳು ಕರಪತ್ರ, ಭಿತ್ತಿಪತ್ರ, ಗೋಡೆ ಬರಹ, ಪೋಸ್ಟರ್, ಬ್ಯಾನರ್ ಇತ್ಯಾದಿ ಮಾಧ್ಯಮಗಳ ಮೂಲಕ ಜಾಥಾದ ಕುರಿತು ಬಿರುಸಿನ ಪ್ರಚಾರ ಕಾರ್ಯ ನಡೆಸಿದರು. ಸ್ಥಳೀಯ ಪತ್ರಿಕೆಗಳಲ್ಲಿ ಈ ಕುರಿತು ಕೆಲವು ಲೇಖನಗಳೂ ಸುದ್ದಿ ಸಮಾಚಾರಗಳೂ ಪ್ರಕಟವಾದವು.

ವರದಿ : ಆರ್. ಚಂದ್ರ

○

ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ

20-11-87ರಂದು ಬೆಂಗಳೂರಿನಿಂದ ಬೀಳ್ಕೊಟ್ಟ ಜಾಥಾ ನಗರದ ಹೊರವಲಯದ ಐ.ಟಿ.ಐ. ಕಾರ್ಮಿಕರ ಬೆಂಬಲದೊಂದಿಗೆ ಕೋಲಾರ ಜಿಲ್ಲೆಯ ಮಾಲೂರು ಮುಖಾಂತರ ಕೋಲಾರ, ಚಿಂತಾಮಣಿ, ಶಿಡ್ಲಘಟ್ಟ ಚಿಕ್ಕಬಳ್ಳಾಪುರ, ಬಾಗೇಪಲ್ಲಿಯಲ್ಲಿ ಭಾರೀ ಸ್ವಾಗತ, ಬೀದಿ, ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಜಾತಾದ ಮುಖಂಡರನ್ನು ಬಹಿರಂಗ ಸಭೆಯ ವೇದಿಕೆಗೆ ಕೊಂಡೊಯ್ಯಲಾಯಿತು. ಹಿಂದೆ ಮುಂದೆ ಓಡಾಡುವ ಕಾರುಗಳು, ನೂರಾರು ಯುವಕರ ಓಡಾಟ, ಉತ್ಸಾಹ, ಘೋಷಣೆಗಳು ಕೋಲಾರ ಜಿಲ್ಲೆಯ ಜನರನ್ನು ರಾಜಕೀಯ ಚಿಂತನೆ, ಚರ್ಚೆಗೆ ಹಚ್ಚಿಸಲು ಸಾಧ್ಯವಾಗಿದೆ.

22-11-87 ರಂದು ಬಾಗೇಪಲ್ಲಿಯಿಂದ ಜಾತಾವನ್ನು ಬೀಳ್ಕೊಟ್ಟು ಆಂಧ್ರ ಪ್ರದೇಶದ ಹಿಂದೂಪುರ ನಗರಕ್ಕೆ ಪ್ರವೇಶಿಸಲಾಯಿತು ರಾಜ್ಯ ಕೃಷಿ ಕೂಲಿಗಾರ ಸಂಘಟನೆ ಸಂಚಾಲಕ ಕಾ.ಶ್ರೀರಾಮರೆಡ್ಡಿಯವರು ಹಾಗೂ ವಿದ್ಯಾರ್ಥಿ, ಯುವಜನ ಮುಖಂಡರ ಜೊತೆ ಜಾತಾವನ್ನು ಬೀಳ್ಕೊಡಲು ಅನಂತಪುರದವರೆಗೆ ಪ್ರಯಾಣ ಮಾಡಿದರು.

22-11-87 ರಂದು ಮುಂಜಾನೆ ಹಿಂದೂಪುರ ತಲುಪುತ್ತಲೇ, ನೂರಾರು, ಜನ ಮಹಿಳಾ ಕೃಷಿ ಕೂಲಿಕಾರರು, ಹಾರಗಳೊಂದಿಗೆ ಜಾತಾವನ್ನು ಸ್ವಾಗತಿಸಿ, ಸ್ವ ಆಸಕ್ತಿಯಿಂದ 21-00 ರೂ. ಜಾತಾ ನಿಧಿಯನ್ನು ನೀಡಿದರು. ಹಲವಾರು ಬಣ್ಣದ ಬಾವುಟಗಳೊಂದಿಗೆ, ಅಲಂಕೃತವಾದ ಜಾತಾದ ಬಸು ಹಿಂದುಪುರ ನಗರದ ಬೀದಿಗಳಲ್ಲಿ ಹಾಯ್ದು ಮೆರವಣಿಗೆಯ ಹಿಂದೆ ಹೋಗುತ್ತಿದ್ದರೆ ಕರಪತ್ರಗಳಿಲ್ಲದ ಕಾರಣ, ಜನ ಮೆರವಣಿಗೆಕಾರರನ್ನು ನಿಲ್ಲಿಸಿ ಏನೆಂದು ಕೇಳಿ, ತಮ್ಮಲ್ಲೇ ಚರ್ಚೆ ಶುರುಮಾಡುತ್ತಿದ್ದರು. ಹಳೇ ಬಸ್ ನಿಲ್ದಾಣದಲ್ಲಿ ಆಂಧ್ರ ಪ್ರದೇಶ ಮಹಿಳಾ ಸಂಘ ಬಹಿರಂಗ ಸಭೆಯನ್ನು ವ್ಯವಸ್ಥೆ ಮಾಡಿತ್ತು. 500 ಕ್ಕೂ ಹೆಚ್ಚು ಪುರುಷರು ಮಹಿಳೆಯರು ಯುವಕರು ಸೇರಿದ್ದರು. ಅಖಿಲ ಭಾರತ ಕಿಸಾನ್ ಸಭಾ ಕಾರ್ಯದರ್ಶಿ ಕಾವಿ.ಕೃಷ್ಣಾರಾವ್ ಮಾತನಾಡಿದರು. ಜಾತಾವನ್ನು ಪ್ರತಿನಿಧಿಸಿ ಕಾ.ಸಿ.ಕೆ. ಚಂದ್ರಪ್ಪನ್ ಅಖಿಲ ಭಾರತ ಕಿಸಾನ್ ಸಭಾ ಮುಖಂಡರು, ಸಿ.ಪಿ.ಐ ದ ಮುಖಂಡರು ಮಾತನಾಡಿದರು. ಕಾ. ಸರಳಾ ದೇವಿಯವರು ವಂದನಾರ್ಪಣೆ ಮಾಡಿದರು.

22-11-87 ರಂದು ಮಧ್ಯಾಹ್ನ ಹಿಂದುಪುರ ಡಿಗ್ರಿಕಾಲೇಜ್ ಸಭಾಂಗಣದಲ್ಲಿ ಸಭೆಯನ್ನು ಎ.ಐ.ಎಸ್.ಎಫ್. ವ್ಯವಸ್ಥೆ ಮಾಡಿತು. ನೂರಾರು ಜನ ಸಭೆಯಲ್ಲಿ ಪಾಲ್ಗೊಂಡಿದ್ದರು. ಜನ ನಾಟ್ಯ ಮಂಡಳಿಯವರ ಕ್ರಾಂತಿ ಗೀತೆಗಳೊಂದಿಗೆ, ಸ್ಥಳೀಯ ಮುಖಂಡರು ಸ್ವಾಗತ ಕೋರಿದರು. ಕಾ. ಈ. ಪದ್ಮನಾಭನ್ ಮಾತನಾಡಿದರು. ಸ್ಥಳೀಯ ವಿದ್ಯಾರ್ಥಿ ಮುಖಂಡರು ಮಾತನಾಡಿದರು.

ಸಾಯಂಕಾಲ 5-00 ಘಂಟೆಗೆ ಅನಂತಪುರ ನಗರದ ಹೊರ ವಲಯದಲ್ಲಿರುವ ವಿಜಯನಗರ ವಿಶ್ವವಿದ್ಯಾಲಯದಲ್ಲಿ ಎ.ಐ.ಎಸ್.ಎಫ್. ಮತ್ತು ಎಸ್.ಎಫ್.ಐ ಜಂಟೀ ಸಮಿತಿಯ ನೇತೃತ್ವದಲ್ಲಿ ಸಭಾ ಭವನದಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ರಾಜೀವ್ ಸರ್ಕಾರದ ಹೊಸ ಶಿಕ್ಷಣ ನೀತಿಯವಿರುದ್ಧ, ನಿರುದ್ಯೋಗದ ವಿರುದ್ಧ ಗಣಕೀಕರಣದ ವಿರುದ್ಧ ಭ್ರಷ್ಟಾಚಾರದ ವಿರುದ್ಧ ಘೋಷಣೆ ಕೂಗುವ ಮುಂಖಾತರ, ವಿದ್ಯಾಕೇಂದ್ರಗಳಲ್ಲಿ ಎಡ ವಿಚಾರ ಧಾರೆಗಳನ್ನು ಕೊಂಡೊಯ್ಯಲು ಅವರು ಮಾಡಿರುವ ಪ್ರಯತ್ನ ಎದ್ದು ಕಾಣುವಂತಿತ್ತು. ಜನ ನಾಟ್ಯ ಮಂಡಳಿಯ ಕ್ರಾಂತಿ ಗೀತೆಗಳೊಂದಿಗೆ ಸ್ಥಳೀಯ ಮುಖಂಡರು ಸ್ವಾಗತ ಮಾಡಿದರು. ಕಾ.ಇ. ಪದ್ಮನಾಭನ್, ಸಿ.ಐ.ಟಿ.ಯು, ಮುಖಂಡರು ಹಾಗೂ ಕಾ. ಸಿ.ಕೆ.ಚಂದ್ರಪ್ಪನ್, ಅಖಿಲ ಭಾರತ ಕಿಸಾನ್ ಸಭಾ ಮುಖಂಡರು ಹಾಗೂ ಜಾತಾವನ್ನು ಪ್ರತಿನಿಧಿಸಿ ವಿದ್ಯಾರ್ಥಿ ಯುವ ಜನರ ಭವಿಷ್ಯ ಮತ್ತು ಪ್ರಸುತ್ತ ರಾಜಕೀಯದ ಬದಲಾವಣೆಯ ಮೇಲೆ ಹೇಗೆ ಅವಲಂಬನೆಯಾಗಿದೆಯೆಂದು ವಿವರಿಸಿದರು. ಆದಿವಾರವಾಗಿದ್ದರೂ ನೂರಾರು ವಿದ್ಯಾರ್ಥಿಗಳು ಸಭೆಯಲ್ಲಿ ಪಾಲ್ಗೊಂಡು ಬದಲಾವಣೆಗಾಗಿ ತಾವು ಹೋರಾಟಕ್ಕಾಗಿ ತಯಾರಾಗಿದ್ದೇವೆಂಬ ಉತ್ಸಾಹವನ್ನು ಪ್ರದರ್ಶಿಸಿದರು.

22-11-87 ರಂದು ಸಾಯಂಕಾಲ ಅನಂತಪುರ ನಗರದ ಹೊರಗೆ ನೂರಾರು ಜನ ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ಪ್ರಜಾನಾಟ್ಯ ಮಂಡಳಿ ಕಲಾವಿದರು ಕೋಲಾಡನೊಂದಿಗೆ, ಕೆಂಪು ಸಮವಸ್ತ್ರ ಧರಿಸಿದ ಯುವಕರ ಘೋಷಣೆನೆಗಳೊಂದಿಗೆ ಅದ್ದೂರಿಯ ಸ್ವಾಗತವನ್ನು ಕೋರಲಾಯಿತು. ಎಸ್.ಎಫ್.ಐ, ಎ.ಐ.ಎಸ್.ಎಫ್, ಡಿ.ವೈ.ಎಫ್.ಐ, ಮಹಿಳಾ ಸಂಘಟನೆ ಕಿಸಾನ್ ಹಾಗೂ ಕಾರ್ಮಿಕ ಸಂಘಟನೆಗೆ ಹಲವಾರು ವಿವಿಧ ಝಂಡಾಗಳೊಂದಿಗೆ ಮೆರವಣಿಗೆ ಎಂತಹವರ ಗಮನವನ್ನು ಸೆಳೆಯುವಂತ್ತಿತ್ತು. ನಗರದ ಬೀದಿಗಳಲ್ಲೆಲ್ಲಾ ಮೆರವಣಿಗೆಯೊಂದಿಗೆ ಲಲಿತಾಕಲಾ ಪರಿಷತ್ ಬಹಿರಂಗ ಸಭಾಂಗಣದಲ್ಲಿ ಸಾವಿರಾರು ಜನರ ಬಹಿರಂಗ ಸಭೆ ನಡೆಸಲಾಯಿತು. 6-40 ಘಂಟೆಯಿಂದ 9-30 ಘಂಟೆಯವರೆಗೆ ಕಾ.ಇ.ಪದ್ಮನಾಭನ್ ಅವರು ಜಾತಾವನ್ನು ಪ್ರತಿನಿಧಿಸಿ ಮಾತನಾಡಿದರು. ರಾಜ್ಯದ ಎಲ್ಲಾ ಸಾಮೂಹಿಕ ಸಂಘಟನೆಯ ಮುಖಂಡರು ಮಾತನಾಡಿದುದ್ದು ಆಂಧ್ರಪ್ರದೇಶದ ಭಾಷೆನ ಮಾತನಾಡುವರ ಹಾಗೂ ಕೇಳುವವರ ವಿಶೇಷತೆಯಾಗಿತ್ತು.

ವರದಿ : ಚಂದ್ರಶೇಖರ ಬಾಳೆ

●

ಭಾರತ ಜಾಥಾ ಹೈದರಬಾದಿನಲ್ಲಿ

ಮುಂದಿನ ತಿಂಗಳು ಡಿಸಂಬರ್ 9 ದೆಹಲಿಗೆ ತೆರಳುವ ಟ್ರಿವೆಂಡ್ರಂ ಜಾಥಾ ಬುಧವಾರ (25-11-87) ಹೈದ್ರಾಬಾದ್‌ನಲ್ಲಿ ಸೇರಿದ್ದು ತೆಲಂಗಾಣದ ಜನತೆ ಭಾರತ ಮಜ್ದೂರ್ ಕಿಸಾನ್ ಜಾಥಾಕ್ಕೆ ಬಾರೀ ಭವ್ಯವಾದ ಸ್ವಾಗತ ಸಿಕ್ಕಿದೆ. ಮಾರಿಗುಡ್ಡೆಯಲ್ಲಿ ಇಬ್ರಾಹಿಂ ಪಟ್ಟಣದಲ್ಲಿ ಜಾಥಾದ ಅಂಗವಾಗಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ಬಿ.ಎನ್.ರೆಡ್ಡಿ, ಎಂ.ಪಿ, ನಾಂರಾಘವ ರೆಡ್ಡಿ ಎಮ್·ಎಲ್.ಎ, ಮಲ್ಲೇಶರಾಜ ಮಧು, ಗಪೂರ್, ಸುಧಾಕರರೆಡ್ಡಿ, ಬಿರಮ್ಮಾಳಮ್ಮ, ಪೂನ್ನಾವೆಂಕಟರೆಡ್ಡಿ ಎಂ.ಪಿ. ಚವ್ಹಾಣ್ ಭಾಷಣ ಮಾಡಿದರು.

ಬುಧುವಾರ ಬೆಳ್ಳಿಗ್ಗೆ ಕರ್ಮಂಸಿಂದ ಪ್ರಾರಂಭವಾದ ಕನ್ಯಾಕುಮಾರಿ ಜಾಥಾಕ್ಕೆ ತೆಲಂಗಾಣದ ಜನರು ಭಾರಿ ಉತ್ಸಾಹದಿಂದ ಸ್ವಾಗತವನ್ನು ನೀಡಿದರು. ಮೇಹಬ್‌ಬಾದ್, ಪೇರಾರ್, ಪರೀತೇಪೇಟೆ ಇಲ್ಲಿಯೂಕೂಡ ಉತ್ಸಾಹದ ಪ್ರತಿಕ್ರಿಯೆ ಕಂಡು ಬಂದಿದೆ. ವಾರಾಂಗಲ್‌ನಲ್ಲಿ ಸಾವಿರಾರು ಮಹಿಳೆಯರು ಸೇರಿ ಹತ್ತಾರು ಸಾವಿರ ಜನರ ಭಾರಿ ಬಹಿರಂಗ ಸಭೆ ನಡೆಯಿತು. ಈ ಬಹಿರಂಗ ಸಭೆಯಲ್ಲಿ ಪರಸತ್ಯನಾರಾಯಣ, ಪಟ್ಟನಾರಾಯಣ ಎಂ.ಎಲ್.ಎ, ಡಿ.ಲಕ್ಷಣ್, ಕೆ.ಎನ್.ಮಹೇಂದ್ರ, ಸಿ. ಎಚ್. ರಾಜೇಶ್ವರರಾವ್, ಸುಗುಣ ಭಾಷಣ ಮಾಡಿದರು.

ಕನ್ಯಾಕುಮಾರಿ ಜಾಥಾ ನ.10 ರಂದುಪ್ರಾರಂಭವಾದ ಭಾರತಮಜ್ದೂರ್‌ಕಿಸಾನ್ ಜಾಥಾ ತಮಿಳುನಾಡಿನಲ್ಲಿ ಭಾರಿ ಭ್ಯವವಾದ ಸ್ವಾಗತದೊಂದಿಗೆ ನಂತರ ಪ್ರಯಾಣ ಬೆಳೆಸಿತು. ಈ ಜಾಥಾ ಕನ್ಯಾಕುಮಾರಿ ತ್ರಿನಂವೇಲಿ, ಚಿದಂಬನಾರ್, ರಾಮರಾಜ್‌ನಾರ್, ಮಧುರೆ, ಅಣ್ಣಾ, ತಿರುಚಿ ದಕ್ಷಿಣಅರ್ಕಾಡ್, ಪಾಂಡಿಚೇರಿ ಚಂಗಲ್‌ಪೇಟೆ ಜಿಲ್ಲೆಗಳೆಲ್ಲಾ ಸುತ್ತಿ ಕಳೆದ ಬುಧುವಾರ 18 ರಂದು ಮದ್ರಾಸ್ ನಗರಕ್ಕೆ ಬಂದಿತು. ಕಾರ್ಮಿಕ ಕ್ಷೇತ್ರವಾದ ಅಂಬಾತೂರ್ ಅವಾಡಿ, ಮುಂತಾದ ಕಡೆಯೆಲ್ಲಾ ಕಾರ್ಮಿಕ, ರೈತರ, ವಿದ್ಯಾರ್ಥಿ ಯುವಜನರೆಲ್ಲ ಮಹಿಳೆಯರಿಂದಲ್ಲೂ ಭಾರಿ ಸ್ವಾಗತ ಜಾಥಾಗೆ ಸಿಕ್ಕಿತು. ನಂತರ ತಿರುತ್ತಣಿ ನಂತರ ಆಂಧ್ರದ ರಾಜ್ಯ ಮುಖಂಡರುಗಳು ಜಾಥಾವನ್ನು ಸ್ವಾಗತಿಸಿ ನಂತರ ಜಾಥಾ ತಿರುಪತಿಗೆಹೊರಟಿತು.

ತಮಿಳುನಾಡಿನ ಕುಡ್‌ತೊರಳ್ಳ್ನಿಂದ ಪ್ರಾರಂಭಿಸಿದ ಉಪಜಾಥಾವೊಂದು ಮತ್ತು ನಾಗರಕೋವಿಲ್‌ನಿಂದ ಪ್ರಾರಂಭವಾದ ಮತ್ತೊಂದು ಉಪಜಾಥಾ ಮಧುರೈನಿಂದ ಹೊರಟಂತಜಾಥಾ ತಿರುಚಿಯಲ್ಲಿ ಭಾರತ ಜಾಥಾವನ್ನು ಸೇರಿಕೊಂಡಿತು.

ತಮಿಳುನಾಡು ಸಿ. ಐ. ಟಿ. ಯು. ಉಪಾಧ್ಯಕ್ಷ ಎ.ನಲ್ಲಶಿವನ್, ಕಾರ್ಯದರ್ಶಿ ರಂಗರಾಜನ್, ಡಿ.ವೈ.ಎಫ್.ಐ ಅಖಿಲ ಭಾರತ ಉಪಾಧ್ಯಕ್ಷರಾದ ಎನ್.ಸೇನ್‌ಮೂರನ್, ಎಸ್.ಎ. ಪೇರುಮಾಳ್ ವಿ.ಎ.ಕುರುಪ್ಪಸ್ವಾಮಿ, ಡಿ.ಲಕ್ಷಣ್, ಎ. ಐ. ಟಿ. ಯು. ಸಿಯ ತಮಿಳುನಾಡಿನ ಪ್ರಧಾನ ಕಾರ್ಯದರ್ಶಿ ಎಂ.ಎಂ.ಗೋಬು, ಎ. ಐ.ವೈ. ಎಫ್, ರಾಜ್ಯ ಕಾರ್ಯದರ್ಶಿ ಮಹೇಂದ್ರನ್ ಮುಂತಾದವರು ಈಜಾಥಾದಲ್ಲಿ ಭಾಗವಹಿಸಿದ್ದರು. (6ನೇ ಪುಟಕ್ಕೆ)

ಎರಡನೇ ಚಾನೆಲ್: ಸಮೂಹ ಮಾಧ್ಯಮಕ್ಕೆ ಬೇಕಾದ ತಿರುವು

—ಜಿ. ಎನ್. ಮೋಹನ್

ಕೇರಳದಾದ್ಯಂತ ಲಕ್ಷ ಲಕ್ಷ ಯುವ ಜನರು ಹೆಗಲಿಗೆ ಹೆಗಲು ಕೊಟ್ಟು 600ಕಿ.ಮಿ. ಉದ್ದದ ಇತಿಹಾಸದ ದಾಖಲೆಯನ್ನು ನಿರ್ಮಿಸುತ್ತಿದ್ದಾಗ ದೂರದರ್ಶನ ಮತ್ತು ಆಕಾಶವಾಣಿ ತನ್ನೆಲ್ಲಾ ವಾರ್ತೆಗಳಲ್ಲಿ ರಾಜೀವ್ ಗಾಂಧಿಯವರ ಪ್ರವಾಸ, ಭಾಷಣ, ಪ್ರತಿಕಾಗೋಷ್ಠಿಗಳನ್ನು ಎಡಬಿಡದೆ ವರದಿ ಮಾಡುತ್ತಿತ್ತು. 600.ಕಿ.ಮಿ.ನ ಜನ ಪ್ರವಾಹ ದೂರದರ್ಶನ, ಆಕಾಶವಾಣಿಗೆ ಕ್ಷುಲ್ಲಕವಾಗಿ ಕಂಡಿತ್ತು.

ಹದಿನಾಲ್ಕು ಸಾವಿರ ಎಸ್.ಎಫ್.ಐ. ವಿದ್ಯಾರ್ಥಿಗಳು ಕಲ್ಕತ್ತಾದಲ್ಲಿ ದೇಶದ ತುರ್ತುಗಳನ್ನು ಚರ್ಚಿಸುತ್ತಿದ್ದಾಗ ಕಾಂಗ್ರೈನ ಆನಂದಶರ್ಮ ಸಣ್ಣ ಕೊಠಡಿಯಲ್ಲಿ ಏರ್ಪಡಿಸಿದ್ದ ಬೆರಳೆಣಿಕೆಯ ಸಭೆಯನ್ನು ಬೃಹತ್ತಾಗಿ ಚಿತ್ರಿಸುತ್ತಿತ್ತು.

ದೂರದರ್ಶನ ಮತ್ತು ಆಕಾಶವಾಣಿ ಕೇಂದ್ರ ಸರ್ಕಾರದ ತುತ್ತೂರಿಯಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಡಿದ್ದೇಹಾಡುತ್ತಾ ಕೆರೆಯ ನೀರನ್ನು ಕೆರೆಗೆ ಚೆಲ್ಲುವ ಈ ಸಮೂಹ ಮಾಧ್ಯಮಗಳು ಎಷ್ಟರಮಟ್ಟಿಗೆ ಸವಕಲಾಗಿದೆ ಎನ್ನುವುದು ಎಲ್ಲಾ ಪ್ರತಿ ಪಕ್ಷಗಳಿಗೂ ತಿಳಿದಿದೆ. ದೂರದರ್ಶನಕ್ಕೆ ಆಕಾಶವಾಣಿ 'ಸುದ್ದಿ' ಎಂದರೆ ಬಹುಮಟ್ಟಿಗೆ ಪ್ರಧಾನಿ ಮತ್ತು ಅವರ ಸಚಿವ ಸಹೋದ್ಯೋಗಿಗಳು ಭಾಗವಹಿಸುವ ಸಭೆ ಸಮಾರಂಭಗಳು, ರಾಜೀವ ಗಾಂಧಿಯವರ ಭಾಷಣ ಮಾತ್ರವೇ ಆಗಿದೆ.

ಈ ಎಲ್ಲಾ ಪರಿಸ್ಥಿತಿಯಿರುವಾಗಲೇ ಪಶ್ಚಿಮಬಂಗಾಳದ ಸರ್ಕಾರ ದೂರದರ್ಶನ ಮತ್ತು ಆಕಾಶವಾಣಿಯ ಈ ನೀತಿಯನ್ನು ವಿರೋಧಿಸಿ ತನ್ನ ಅಸಹಕಾರ ಘೋಷಿಸಿದೆಯಲ್ಲದೆ ಆಕಾಶವಾಣಿ ಮತ್ತು ದೂರದರ್ಶನ ಸಲಹಾ ಮಂಡಳಿಗಳಲ್ಲಿದ್ದ ಪಶ್ಚಿಮಬಂಗಾಳ ಸರ್ಕಾರದ ಪ್ರತಿನಿಧಿಗಳನ್ನು ವಾಪಸ್ ಕರೆಸಿಕೊಂಡಿದೆ.

ದೇಶದ ಸಮಗ್ರತೆಯನ್ನೇ ಕುರಿತಂತೆ ರಾಜೀವಗಾಂಧಿಯ ಅಥವಾ ಸರ್ಕಾರದ ವಕ್ತಾರರ ಭಾಷಣಗಳನ್ನು ಪದೇ ಪದೇ ಪ್ರಸಾರ ಮಾಡುವಾಗಲೇ ಅದೇ ಉದ್ದೇಶಕ್ಕಾಗಿಯೆ ಲಕ್ಷಾಂತರ ಜನರು ಗಂಟೆಗಟ್ಟಲೆ ಕೈ ಕೈಹಿಡಿದು ಬಾಂಧವ್ಯದ ಗೋಡೆಗಳನ್ನು ನಿರ್ಮಿಸಿದ್ದು ಸಮೂಹ ಮಾಧ್ಯಮಗಳಿಗೆ 'ಸುದ್ದಿ' ಏಕಾಗುವುದಿಲ್ಲ? ಆಕಾಶವಾಣಿ ಕೇಂದ್ರದ ಸುದ್ದಿಗಳನ್ನೇ ಏಕೆ ಎಲ್ಲರ ಮೇಲೆಹೇರಬೇಕು. ಸ್ಥಳೀಯ ಸರ್ಕಾರಗಳ ಸುದ್ದಿಗಳನ್ನು ಪ್ರಸಾರ ಮಾಡಲು ಸಾಧ್ಯವಿಲ್ಲವೆ?

'2ನೇ ಚಾನೆಲ್' ಇಂದಿನ ತುರ್ತು ಅವಶ್ಯಕತೆಎಂದು ಎಲ್ಲಾ ಪ್ರತಿಪಕ್ಷಗಳು ಅದರ ಜಾರಿಗಾಗಿ ಒತ್ತಾಯಿಸುತ್ತಲೇ ಇವೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಆಯಾ ರಾಜ್ಯಗಳಿಗೆ, ಆಯಾ ಭಾಷೆಗಳಲ್ಲಿ, ಆಯಾ ಪ್ರದೇಶಗಳ ಬಗ್ಗೆ ಕಾರ್ಯಕ್ರಮವನ್ನು ಪ್ರಸಾರ ಮಾಡಲು ಈ ಎರಡನೇ ಚಾನೆಲ್ ಅವಕಾಶಮಾಡಿಕೊಡುತ್ತದೆ. ಎರಡನೇ ಚಾನೆಲ್ ಪ್ರಾರಂಭವಾದರೆ ಸ್ಥಳೀಯ ಸಂಸ್ಕೃತಿಯನ್ನು ಹೆಚ್ಚು ಹೆಚ್ಚು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. 'ದೂರದರ್ಶನ'ಕ್ಕೆ ಕೇವಲ ನಗರದಲ್ಲಿ ಮಾತ್ರ ಪ್ರೇಕ್ಷಕರಿದ್ದಾರೆ ಎಂಬ ಕೂಗಿರುವಾಗ ಎರಡನೇ ಚಾನೆಲ್‌ನಲ್ಲಿ ಸ್ಥಳೀಯ ಸಂಸ್ಕೃತಿ ಪ್ರಸಾರವಾಗ ತೊಡಗಿದರೆ ತಾನೇ ತಾನಾಗಿ ರಾಜ್ಯದ ಹಳ್ಳಿಹಳ್ಳಿಯಲ್ಲೂ ಪ್ರೇಕ್ಷಕರು ದೊರಕುತ್ತಾರೆ.

'ಎರಡನೇ ಚಾನೆಲ್' ಎಂಬ ಮಾತೇ ಕೇಂದ್ರ ಸರ್ಕಾರಕ್ಕೆ ಬಿಸಿ ತುಪ್ಪವಿದ್ದಂತೆ ಎರಡನೇ ಚಾನೆಲ್‌ಗೆ ಅವಕಾಶ ಮಾಡಿಕೊಟ್ಟರೆ ಮೊದಲನೆಯದಾಗಿ ಕೇಂದ್ರ ಪ್ರಸಾರದ ಅವಧಿ ಕಡಿಮೆಯಾಗುತ್ತದೆ. ರಾಜೀವಗಾಂಧಿಯವರ ಮುಖ ದೂರದರ್ಶನದಲ್ಲಿ ಹೆಚ್ಚು ಕಾಣುವ ಅವಕಾಶ ಕಡಿಮೆಯಾಗುತ್ತದೆ. ಎರಡನೆಯದಾಗಿ ದೂರದರ್ಶನ, ಆಕಾಶವಾಣಿಗಳಲ್ಲಿ ಈ ಚಾನೆಲ್ ಮೂಲಕ ಸ್ಥಳೀಯ ಸುದ್ದಿಗಳೂ ಪ್ರಸಾರವಾಗಲೂ ಪ್ರಾರಂಭವಾದರೆ ಜ್ಯೋತಿಬಸು, ರಾಮಕೃಷ್ಣ ಹೆಗಡೆ, ಎನ್.ಟಿ.ಆರ್. ಸಹ ಸುದ್ದಿಗಳಲ್ಲಿ ಹೆಚ್ಚು ಕಾಣಿಸಿಕೊಂಡು ಬಿಡುತ್ತಾರಲ್ಲ ಎಂಬುದು ಕೇಂದ್ರದ ಚಿಂತೆ. ಆಗ ರಾಜ್ಯ ಮತ್ತು ಕೇಂದ್ರಕ್ಕೆ ನೇರ ತಿಕ್ಕಾಟ ಪ್ರಾರಂಭವಾಗುತ್ತದೆ.

ಪ.ಬಂಗಾಳ ಸರ್ಕಾರ ಮೊದಲಿನಿಂದಲೂ ಎರಡನೇ ಚಾನೆಲ್‌ಗಾಗಿ ಒತ್ತಾಯಿಸುತ್ತಲೇ ಬಂದಿದೆ. ದೂರದರ್ಶನ, ಆಕಾಶವಾಣಿಗಳು ದೇಶದ ಕೊನೆಯ ಜನರನ್ನೂ ಮುಟ್ಟಬೇಕಾದರೆ ಅವನ ಆಶೋತ್ತರಗಳೂ ಅಲ್ಲಿ ಬಿಂಬಿತವಾಗಬೇಕು. ಅದು ಸಾಧ್ಯವಾಗುವುದು ಎರಡನೇಯ ಚಾನೆಲ್ ಅಸ್ತಿತ್ವಕ್ಕೆ ಬಂದಾಗ. ಪ್ರಸುತ್ತ ಸಂದರ್ಭದಲ್ಲಿ ದೂರದರ್ಶನದ ಬಹು ಭಾಗವನ್ನು ವಿದೇಶಿ ಕಾರ್ಯಕ್ರಮಗಳೇ ಆವರಿಸಿರುವಾಗ ರಾಷ್ಟ್ರದ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದಾದರೂ ಹೇಗೆ?

ಇತ್ತೀಚಿನ ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಪ.ಬಂಗಾಳ ಸರ್ಕಾರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 'ಎರಡನೇ ಚಾನೆಲ್'ನ್ನು ಮುಖ್ಯವಾಗಿ ಹೆಸರಿಸಿತ್ತು. ರಾಜ್ಯಕ್ಕೆ ಎರಡನೇ ಚಾನೆಲ್ ಒದಗಿಸುವಲ್ಲಿ ಕೇಂದ್ರದ ವಿರುದ್ಧ ಪ್ರತಿಭಟನಾ ಆಂದೋಲನವನ್ನು ರೂಪಿಸುವುದಾಗಿ ಹೇಳಿತ್ತು. ಎಸ್.ಎಫ್.ಐ, ಡಿ.ವೈ.ಎಫ್.ಐ. ಆಕಾಶವಾಣಿ ದೂರದರ್ಶನದ ಮಲತಾಯಿ ನೀತಿ ವಿರುದ್ಧ ಹಾಗೂ ಎರಡನೇ ಚಾನೆಲ್ ಒತ್ತಾಯಿಸಿ ಹಲವಾರು ರಾಷ್ಟ್ರ ಮಟ್ಟದ ಕಾರ್ಯಕ್ರಮಗಳನ್ನು ಆಚರಿಸಿವೆ.

ರಾಜ್ಯಕ್ಕಾಗಿಯೇ ಪ್ರತ್ಯೇಕ ಚಾನೆಲ್ ಬೇಕೆಂಬ ಹೋರಾಟ ಬೇಡಿಕೆ ಇಂದುನಿನ್ನೆಯದಲ್ಲ ರಾಜ್ಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಅವಕಾಶಕೊಡಬೇಕೆಂದು ಈ ಹಿಂದೆಯೇ ಪಟ್ಟಾಭಿ ಸೀತಾರಾಮಯ್ಯನವರು ಒತ್ತಾಯಿಸಿದ್ದರು. 1947ನೇ ಆಗಸ್ಟ್ 26 ರಂದು ಸಂವಿಧಾನ ಸಭೆಯಲ್ಲಿಇದರಬಗ್ಗೆ ಚರ್ಚೆಯಾಯಿತು. ಆಗ ಕೆ.ಸಂತಾನಂ, ಶಿವಲಾಲ್‌ಸಕ್ಸೇನಾ, ಅನಂತಶಯನಂ ಐಯ್ಯಂಗಾರ್‌ರವರುಸಂವಿಧಾನಸಭೆಯಲ್ಲಿ ರಾಜ್ಯಗಳಿಗೆ, ಕೇಂದ್ರ ಕಾನೂನುಗಳಿಗೆ ಒಳಪಟ್ಟು ತಮ್ಮದೇ ಆದ ಪ್ರಸಾರ ಕೇಂದ್ರಗಳನ್ನು ಹೊಂದಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು. ಆ ಮೇರೆಗೆ ಸಂವಿಧಾನದ ಅನುಚ್ಛೇದ 258(1)ನ್ನು ಸಂವಿಧಾನದ ಕರಡಿನಲ್ಲಿ ಸೇರಿಸಲಾಯಿತು.

ಸ್ವಾತಂತ್ರ್ಯ ನಂತರ, ಇಂದಿರಾ ಗಾಂಧಿಯವರ ಕಾಲದಲ್ಲೂ ಎರಡನೇ ಚಾನೆಲ್‌ಗಾಗಿ ಹಲವು ವರದಿಗಳು, ಬೇಡಿಕೆಗಳು ಸಿದ್ಧವಾದವು. ಇಂದಿರಾ ಗಾಂಧಿಯವರೇ ಎರಡು ಸಮಿತಿಗಳನ್ನು ಈ ಬೇಡಿಕೆಯ ಬಗ್ಗೆ ಪರಿಶೀಲಿಸಲು ನೇಮಿಸಿದರು. ಎರಡೂ ಸಮಿತಿಗಳು ತತ್‌ಕ್ಷಣವೇ ಎರಡನೇ ಚಾನೆಲ್ ಪ್ರಾರಂಭಿಸಬೇಕೆಂದರು. ಇಂದಿರಾ ಗಾಂಧಿ ಸರ್ಕಾರ ಎರಡೂವರದಿಗಳನ್ನು ಮೂಲೆಗೆ ತಳ್ಳಿತು. 1964 ರಲ್ಲಿ ಸ್ವತ: ಇಂದಿರಾಗಾಂಧಿಯವರೇ ವಾರ್ತಾ ಮತ್ತು ಪ್ರಸಾರ ಮಂತ್ರಿಗಳಾಗಿದ್ದರು.

ಅಶೋಕ್ ಕೆ. ಚಂದಾರವರ ನೇತೃತ್ವದಲ್ಲಿ ರಚಿತವಾದ ಮೊದಲ ಸಮಿತಿ 1966 ನೆ ಏಪ್ರಿಲ್‌ನಲ್ಲಿ ತನ್ನ ಮಹತ್ವದ ವರದಿ ಸಲ್ಲಿಸಿತು. ಆಗ ಅಸ್ತಿತ್ವದಲ್ಲಿದ್ದ ಆಕಾಶವಾಣಿಯ ಬಗ್ಗೆ ವರದಿ ನೀಡುತ್ತಾ 'ಆಕಾಶವಾಣಿ ಬಗ್ಗೆ ಒಂದು ರಾಷ್ಟ್ರೀಯ ಕಾರ್ಪೊರೇಷನ್ ಸ್ಥಾಪಿಸಬೇಕೆಂದೂ ಮತ್ತು ಆಕಾಶವಾಣಿ ಪ್ರಮುಖ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯ ಇರತಕ್ಕ ರಾಷ್ಟ್ರೀಯ ಪ್ರಾಧಿಕಾರವಾಗಿ ರೂಪುಗೊಳ್ಳಬೇಕೆಂದು ವರದಿ ಮಾಡಿತು. ಚಂದಾ ಸಮಿತಿಯು ತನ್ನ ವರದಿಯಲ್ಲಿ ಕೇಂದ್ರ ಹಿಡಿತವನ್ನು ಚೆನ್ನಾಗಿ ತರಾಟೆಗೆ ತೆಗೆದುಕೊಂಡು 'ಕಾರ್ಯಕ್ರಮಗಳ ಕೇಂದ್ರೀಯ ನಿಯಂತ್ರಣಕ್ಕೆ ತತ್‌ಕ್ಷಣವೇ ಮಂಗಳ ಹಾಡಬೇಕು'ಎಂದಿತು.

ಈ ವರದಿಯಲ್ಲಿ ಚಾನೆಲ್‌ಗಳ ಬಗ್ಗೆ ಬರೆಯುತ್ತಾ, ಸ್ಟೇಷನ್ ಡೈರೆಕ್ಟರ್ ಮತ್ತು ರಾಜ್ಯ ಸರಕಾರ ಇವರ ನಡುವೆ ನಿಕಟ ಸಂಬಂಧ ಏರ್ಪಡಬೇಕು. ಕೃಷಿ, ಶಿಕ್ಷಣ, ಕುಟುಂಬ ಯೋಜನೆ ಮತ್ತು ಇತರ ಸಾಮಾಜಿಕ ಸೇವೆಗಳ ಅಭಿವೃದ್ಧಿಯ ದೃಷ್ಟಿಯಿಂದ ಕಾರ್ಯಕ್ರಮ ಯೋಜನೆ ಇನ್ನಷ್ಟು ನಿಕಟವರ್ತಿ ಕಾರ್ಯವಾಗಬೇಕು ಮತ್ತು ಆ ಬಗ್ಗೆ ನಿರಂತರ ಕಾಳಜಿವಹಿಸಿ, ವಿಚಾರ ವಿನಿಮಯ ಮಾಡಿದ ನಂತರವೇ ಅಂಥ ಕಾರ್ಯಕ್ರಮ ರೂಪುಗೊಳ್ಳಬೇಕು ಎಂದಿದೆಯಲ್ಲದೆ ಮುಂದುವರಿದು ವಿಕೇಂದ್ರೀಕರಣ ಸಾಧಿಸಲು ಇನ್ನೊಂದು ಉಪಾಯವೆಂದರೆ ಹಲವಾರು ಚಾನೆಲ್‌ಗಳ ಏರ್ಪಾಟು. ಆ ಪೈಕಿ ಒಂದು ರಾಷ್ಟ್ರೀಯಕಾರ್ಯಕ್ರಮಕ್ಕೆ ಮೂರನೆಯ ಸ್ಥಳೀಯ ಟ್ರಾನ್ಸ್‌ಮೀಟರ್ ಮೂಲಕ ಸ್ಥಳೀಯ ಸೇವೆಗೆ ಈ ಕುರಿತು ನಾವು ಈ ಹಿಂದೆಯೇ ಶಿಫಾರಸ್ಸು ಮಾಡಿದ್ದೇವೆ. ನಾವು ಈಗಾಗಲೆ ಹೇಳಿರುವ ಹಾಗೆ ಸಾಮಾಜಿಕ ಮತ್ತು ವಯಸ್ಕ ಶಿಕ್ಷಣದ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಮತ್ತು ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸಲು ಒಂದೇ ಉಪಾಯವೆಂದರೆ ಸ್ಥಳೀಯ ಸ್ಟೇಷನ್‌ಗಳ ಮೂಲಕ ಪ್ರಸಾರ ಎಂದಿದೆ.

ಇಂದಿರಾಗಾಂಧಿಯವರು ಜನರ ಕಣ್ಣೊರೆಸಲು ನೇಮಿಸಿದ ಈ ಸಮಿತಿ ಅವರಿಗೇ ತಿರುಮಂತ್ರವಾಯಿತು. ತಕ್ಷಣವೇ ಈವರದಿ ಮೂಲೆಗುಂಪಾಯಿತು. ಆದರೆ ತದನಂತರ 1977ರ ಆಗಸ್ಟ್‌ನಲ್ಲಿ ಪುನ: ಒತ್ತಾಯದ ಮೇರೆಗೆ ಬಿ.ಜಿ. ವರ್ಗೀಸ್‌ರವರ ನೇತೃತ್ವದಲ್ಲಿ ಮತ್ತೊಂದು ಸಮಿತಿಯನ್ನು ನೇಮಿಸಲಾಯಿತು. ಆಕಾಶವಾಣಿ ಮತ್ತು ದೂರದರ್ಶನದ ಕಾರ್ಯ ನಿರ್ವಹಣೆ ಪರಿಶೀಲಿಸಿ, ಅದಕ್ಕೆ ಬೇಕಾದ ಮುಂದಿನ ವ್ಯವಸ್ಥೆ ಕುರಿತು ಶಿಫಾರಸ್ಸುಮಾಡಲು ಕೋರಿತು. ಬಿ.ಜಿ. ವರ್ಗೀಸ್ ಸಮಿತಿ ಸಹ ಮೇಲಿನ ವರದಿಯ ಹಲವು ಅಂಶಗಳನ್ನು ಪುರಸ್ಕರಿಸಿ ರಾಷ್ಟ್ರೀಯಪ್ರಸರಣ ಟ್ರಸ್ಟ್ ರೂಪಿಸಲು ಸಲಹೆ ನೀಡಿತು.

ಇತ್ತೀಚೆಗೆ 1985ನೇ ಮಾರ್ಚ್ ತಿಂಗಳಲ್ಲಿ ಡಾ.ಪಿ.ಸಿ.ಜೋಶಿಯವರ ಅಧ್ಯಕ್ಷತೆಯಲ್ಲಿನ ಸಮಿತಿ ದೂರದರ್ಶನ ಕಾರ್ಯಕ್ರಮದ ಬಗ್ಗೆ ವರದಿ ಮಂಡಿಸಿತು. 'ದೂರದರ್ಶನಕ್ಕೆ ಹಲವಾರು ಚಾನೆಲ್‌ಗಳನ್ನು ಪ್ರಾರಂಭಿಸುವ ವಿಷಯವನ್ನು ನಾವು ತಳ್ಳಿಹಾಕುವುದಿಲ್ಲ' ಎಂದಿತು. ಈಸಮಿತಿಯ ಸದಸ್ಯರಲ್ಲೊಬ್ಬರಾದ ಡಾ.ಭೂಪೇನ್‌ಹಜಾರಿಕಾ 'ಇಡೀ ದೇಶದ ದೂರದರ್ಶನ ವೀಕ್ಷಕರನ್ನು ಒಂದೇ ಒಂದು ಚಾನಲ್‌ನ ಕಾರ್ಯಕ್ರಮಗಳ ಜೀತದಾಳುಗಳಾಗಿ ಎಂದರೆ ವೀಕ್ಷಕರು ನಮ್ಮನ್ನು ಬಿಡುತ್ತಾರೆಯೆ? ಎಂದು ಪ್ರಶ್ನಿಸಿದ್ದಾರೆ.

ಭಾರತ ಬಾಹ್ಯಾಕಾಶದ ವಿವಿಧ ಹೊಸ ರೀತಿಯ ಯೋಜನೆಗಳಲ್ಲಿ ಕೈಗೂಡಿಸಿ ಯಶಸ್ವಿಯಾಗಿದೆ. ಇನ್ಸಾಟ್-1 ಬಿ ಯಿಂದಾಗಿ ಸಮೂಹ ಮಾಧ್ಯಮಗಳ ಸಂಪರ್ಕವನ್ನು ಇನ್ನೂ ಹೆಚ್ಚು ವಿಸ್ತಾರ ಅರ್ಥ ಪಡೆದಿದೆ. ಇನ್ಸಾಟ್-1 ಬಿ ಕಾರ್ಯಕ್ರಮದಿಂದಾಗಿ ಈಗ ಹೆಚ್ಚು ಚಾನೆಲ್‌ಗಳನ್ನು ಸುಲಭವಾಗಿ ಪ್ರಾರಂಭಿಸಬಹುದು.. ಆದರೆ ಈ ಎಲ್ಲಾ ಸಂಶೋಧನೆಗಳು, ವಿನೂತನ ಪ್ರಯೋಗಗಳು ಸರ್ಕಾರದ ಹಿಡಿತದಲ್ಲಿ ಸಿಕ್ಕುಬಿದ್ದಿದೆ. ಸರ್ಕಾರದ ಧೋರಣೆಗಳು ಹಲವು ನೂತನ ಸಂಶೋಧನೆಗಳ ಫಸಲನ್ನೂ ಮಂಕಾಗಿಸಿದೆ. ●

ಕಲ್ಕತ್ತಾದಿಂದ ಹೊರಟ ಜಾಥಾ

ನವಂಬರ್

- 16–17 ಕಲ್ಕತ್ತಾ, ಪ.ಬಂಗಾಳ ದುರ್ಗಾಪುರ,
- 18 ನಿರಸಾ, ದಾನಬಾದ್ ಬೊಕಾರೊ ತಂಗುವುದು
- 19 ಬೆರಮೊ ಗಿರೀದಿ, ದಿಯೋಘಾಟ್ ತಂಗುವುದು
- 20 ಗೋದ ಊಟ ಲಾಲ್ ಮಾಟಿಯ, ಪಿರಿ ಪೈಟ ಎಕಚಾರಿ, ಬಾಗಲ್ ಪುರ ತಂಗುವುದು
- 21 ಮುಂಗೀರ್ ಲಕ್ಷೀಶ್ವರೈ ಊಟ ಮಾರಾಚಿ, ಬೆಹಾಟ, ತಂಗುವುದು
- 22 ಸಮಷ್ಠಿಪುರ ಮುಜಾಫರ್ ಪುರ, ಹಾಜೀಪುರ, ಪಾಟ್ನ ತಂಗುವುದು
- 23 ದನಪುರ, ನೂನೀರ್, ಅರಾಹ ತಂಗುವುದು
- 24 ಷಹಾಪುರ, ದೂಂರೊನ್ ಊಟ ಬೂಕ್ಸರ್ ತಂಗುವುದು
- 25 ಬಾಹುಲೀ ಕೊಟ ನಾರಾಯನ ಪುರ, ಮಹಮ್ಮದಾಬಾದ್, ಗಾಜೀಪುರ ತಂಗುವುದು
- 26 ಸೈದ್‌ಪುರ, ಅಷಾಪುರ, ವಾರಣಾಸಿ ತಂಗುವುದು
- 27 ನಾನ್ಸಿ, ಹರಾನ, ಪಿಂದ್ರ, ಜಾನ್‌ಪುರ ತಂಗುವುದು
- 28 ಕಾದಿಪುರ, ದೋಸ್ತ್‌ಪುರ ಅಕ್ಬರ್‌ಪುರ ತಂಗುವುದು
- 29 ಕುರೆಕಾರ್, ಮಿಲ್ಕಪುರ ಬಿಕಾರಿಪುರ, ಫೈಜಾಬಾದ್ ತಂಗುವುದು
- 30 ಬಾರಬಂಕಿ, ಲಕ್ನೋ ತಂಗುವುದು

ಡಿಸಂಬರ್

- 1 ಮೊಹನ್, ಮಕೂರ್, ಕಾನ್‌ಪುರ್ ತಂಗುವುದು
- 2 ಬಿಲಾಹಾರ್, ಕನೋಜ್, ಫೆಧಿಯಘರ್, ಫರುಕಾಬಾದ್ ತಂಗುವುದು
- 3 ಕರಿಂ ಗಂಜ್, ಕಾಸ್‌ಗಂಜ್, ಬದೂನ್, ಬರೈಲಿ
- 4 ರಾಮ್‌ಪುರ್, ಮೊರಾದಾಬಾದ್ ತಂಗುವುದು
- 5 ಸಿಹೋಹಾರ, ದಾಂಪುರ ನಜೀಬಬಾದ್ ತಂಗುವುದು
- 6 ಹರಿದ್ವಾರ (ಬಿ.ಎಚ್.ಇ.ಎಲ್.) ಋಷಿಕೇಶ್, ಸಹರಾಂಪುರ ತಂಗುವುದು
- 7 ಮುಜಾಫುರ್ ನಗರ, ಮೀರತ್ ಗಾಜಿಯಾಬಾದ್ ತಂಗುವುದು

3ನೇ ಡಿ. ವೈ. ಎಫ್. ಐ. ರಾಷ್ಟ್ರ ಸಮ್ಮೇಳನಕ್ಕೆ ಸಜ್ಜಾಗುತ್ತಿರುವ ತಮಿಳುನಾಡು

-ಎಸ್. ಶಿವರಾಂ

ರಾಷ್ಟ್ರದ ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ತಮಿಳುನಾಡಿನ ವಣ್ಣಿಯಾರ್ ಮೀಸಲಾತಿ ಚಳುವಳಿ ಹಾಗೂ ಶ್ರೀಲಂಕಾದ್ವೀಪದಎಲ್.ಟಿ.ಟಿ.ಇ.ಯ ಶಾಂತಿ ಒಪ್ಪಂದದ ವಿರೋಧಿ ವಿಧ್ವಂಸಕ ಕೃತ್ಯಗಳು, ಅದರಿಂದ ತಮಿಳುನಾಡಿನ ಎಲ್ಲಾ ಅವಕಾಶವಾದಿ ಛಲಪಂಥೀಯ ರಾಜಕೀಯಪಕ್ಷಗಳ ಪ್ರತ್ಯೇಕತಾ ಮತ್ತು ರಾಷ್ಟ್ರ ವಿರೋಧಿ ನಿಲುವುಗಳಿಂದಾಗಿ ತಮಿಳುನಾಡು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಜರ್ಜರಿತಗೊಂಡಿದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರದ ಅತ್ಯಂತ ಬಲಿಷ್ಟ ಪ್ರಗತಿಪರ ಹಾಗೂ ರಾಷ್ಟ್ರದ ಐಕ್ಯತೆ-ಸಮಗ್ರತೆಗಾಗಿ ಸಮರ್ಪಿಸಿಕೊಂಡಿರುವ ತ್ಯಾಗ ಬಲಿದಾನಗಳ ಸಮರಧೀರ ಡಿ.ವೈ ಎಫ್.ಐ.ಮೂರನೆ ರಾಷ್ಟ್ರ ಸಮ್ಮೇಳನವನ್ನು ಯಶಸ್ವೀ ಮಾಡಲು ಮದರಾಸು ನಗರ ಮಾತ್ರವಲ್ಲ ಇಡೀ ತಮಿಳುನಾಡು ಈ ಐತಿಹಾಸಿಕ ಸಮ್ಮೇಳನ ನಡೆಸಲು ಸಿದ್ಧವಾಗುತ್ತಿದೆ.

ಏಕಕಾಲದಲ್ಲಿ ಸಾವಿರ ಜನರಿಗೂ ಮತ್ತು ಸ್ವಯಂಸೇವಕ ದಳದವರಿಗೂ ಊಟ—ವಸತಿ ಏರ್ಪಡಿಸುವ, ಎರಡು ಬೃಹತ್ ಸಂಭಾಗಣಗಳುಳ್ಳ, ನೂರಾರು ಕೊಠಡಿಗಳೂ ಮತ್ತು ಕಲೆ ಕ್ರೀಡಾ ಚಟುವಟಿಕೆಗಳ ಮೈದಾನ ಹಾಗೂ ಭೂಮಿಕೆಗಳುಳ್ಳವಿಜಯ ಶೇಷಮಹಲ್ ಸಮ್ಮೇಳನದ ಸ್ಥಳವಾಗಿದೆ.

ಮದರಾಸ್ ನಗರಕ್ಕೆ ಕಾಂ.ಗುರುನಾಮ್‌ಸಿಂಗ್ ಉಪ್ಪಲ್ ನಗರವೆಂದೂ ಸಮ್ಮೇಳನದ ಸಭಾಂಗಣಕ್ಕೆ ಕಾ.ಬಾಲಕೃಷ್ಣನ್ ಸಭಾಂಗಣವೆಂದೂ ಡಿಸೆಂಬರ್ 19 ರಂದು ರಾಷ್ಟ್ರದ ಸಮಗ್ರತೆ ಐಕ್ಯತೆಗಾಗಿಯೂಪ್ರಜಾಸತ್ತೆಯ ರಕ್ಷಣೆಗಾಗಿಯೂ ಸಮಾವೇಶಗೊಳ್ಳಲಿರುವ ಬೃಹತ್ ಯುವ ರ್‍ಯಾಲಿಯ ಮೈದಾನವಾದ ವಿಶ್ವವಿಖ್ಯಾತ ಮರಿನಾ ಬೀಚ್‌ಗೆ ಕಾ.ವಿ.ಪಿ.ಚಿಂತನ್‌ರವರಹೆಸರನ್ನು ಇಡಲಾಗಿದೆ.

ರಾಷ್ಟ್ರದ ಕಾರ್ಮಿಕ ಚಳುವಳಿಯ ನೇತಾರ ಸಿ.ಪಿ.ಐ(ಎಂ) ಮುಖಂಡ ಕಾ.ಪಿ.ರಾಮಮೂರ್ತಿ ಅವರು ಅಧ್ಯಕ್ಷರಾಗಿರುವ ಸ್ವಾಗತ ಸಮಿತಿಯಲ್ಲಿ ತಮಿಳುನಾಡಿನ ಎಲ್ಲಾ ವಿಭಾಗಗಳ ಪ್ರಗತಿಪರ ಗಣ್ಯರಿದ್ದಾರೆ. ಸ್ವಾಗತ ಸಮಿತಿಯು ಹಲವು ಉಪ ಸಮಿತಿಗಳನ್ನು ರಚಿಸಿದೆ. ಯಶಸ್ವಿ ಮಾಡುವ ನಿಟ್ಟನಲ್ಲಿ ಹಗಲುರಾತ್ರಿಗಳ ಭೇದವಿಲ್ಲದೆ ಸ್ವಾಗತ ಸಮಿತಿಯು ತೀವ್ರ ಚಟುವಟಿಕೆಯಲ್ಲಿದೆ.

ಸಮ್ಮೇಳನದ ಖರ್ಚನ್ನು ಬರಿಸಲು ಸುಮಾರು ಎಂಟು ಲಕ್ಷ ರೂ.ಗಳ ಅಂದಾಜು ಮಾಡಿದ್ದು, ಸಾವಿರಾರು ತಂಡಗಳು ತಮಿಳುನಾಡಿನ ಪ್ರತಿ ಮನೆಯನ್ನೂ ಸಂದರ್ಶಿಸುತ್ತಿವೆ. ಕ್ರೀಡಾ ಸ್ಪರ್ಧೆಗಳೂ ನಿಧಿ ಸಂಗ್ರಹದಲ್ಲಿ ತೊಡಗಿವೆ. ಇತ್ತೀಚೆಗೆ ಮಧುರೆಯಲ್ಲಿ ನಡೆದ ಐದುನೂರು ಕ್ರೀಡಾಪಟುಗಳು ಭಾಗವಹಿಸಿದ್ದ ಸ್ಪರ್ಧೆಯಲ್ಲಿ ಮುವತ್ತು ಸಾವಿರ ನಿಧಿ ಸಂಗ್ರಹಿಸಲಾಯಿತು. ಮದರಾಸು ನಗರದ 150ವಿಭಾಗಗಳಲ್ಲಿ 100 ತಂಡಗಳು ಕೆಲವೇ ದಿನಗಳಲ್ಲಿ 1.75ಲಕ್ಷ ರೂ.ಗಳನ್ನು ಸಂಗ್ರಹಿಸಿದುವು. ಹೀಗೆ ರಾಜ್ಯದ ಎಲ್ಲಾ ಮೂಲೆ ಮೂಲೆಗಳಿಂದ ನಿಧಿ ಹರಿದು ಬರುತ್ತಿದೆ.

ಈಗಾಗಲೇ 25 ಲಕ್ಷಕ್ಕೂ ಮಿಗಿಲಾಗಿ ಕರಪತ್ರಮತ್ತು 10ಸಾವಿರಕ್ಕೂ ಮಿಗಿಲಾಗಿ ಪೋಸ್ಟರ್ಸ್ ಬಿಡುಗಡೆ ಮಾಡಲಾಗಿದೆ. ಸಹಸ್ರಾರು ಬ್ಯಾನ್ಯರ್ಸ್ ಬರೆಯಲ್ಪಡುತ್ತಿವೆ. ಕಲಾತ್ಮಕ ಗೋಡೆ ಬರಹಗಳು ಅಖಿಲ ಭಾರತ ಪ್ರತಿನಿಧಿಗಳನ್ನು ಸ್ವಾಗತಿಸುತ್ತಿವೆ. 10 ಸಾವಿರ ಕೆಂಪು ಚುಕ್ಕೆಯ ಬಿಳಿ ಬಾವುಟಗಳು ಛಿದ್ರಕಾರಿ ಮತೀಯ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ದಿಗಿಲಾಗುವಂತೆ ಡಿಸಂಬರ್ 6 ರಂದು ಆರೋಹಣವಾಗಲಿವೆ. ಡಿಸೆಂಬರ್ ಮೊದಲ ವಾರದಲ್ಲಿ 15 ಸಾವಿರಕ್ಕೂ ಮಿಗಿಲಾಗಿ ರಸ್ತೆಯ ಬದಿಯ ಸಭೆಗಳು ಮತ್ತು ಬಹಿರಂಗ ಸಭೆಗಳು ನಡೆಯಲಿವೆ.

ಅಖಿಲ ಭಾರತ ಮುಖಂಡರಾದ ಕಾ.ಎಂ.ವಿಜಯಕುಮಾರ್, ಎಂ. ಎ. ಬೇಬಿ, ಸೈಪುದ್ದೀನ್‌ಚೌದರಿ ಮತ್ತು ಶ್ರೀನಿವಾಸರಾವ್‌ರವರುಗಳು ಹಲವು ಬಾರಿ ರಾಜ್ಯಪ್ರವಾಸಕ್ಕೆಗೊಂಡಿದ್ದಾರೆ.

ಸಮ್ಮೇಳನದ ಕೊನೆಯ ದಿನವಾದ ಡಿಸಂಬರ್ 19 ರಂದು ಪ್ರಜಾಸತ್ತೆಯ ರಕ್ಷಣೆಗಾಗಿ, ರಾಷ್ಟ್ರದ ಸಮಗ್ರತೆ ಐಕ್ಯತೆಗಾಗಿ ವಿ.ಪಿ.ಚಿಂತನ್ ಮೈದಾನಕ್ಕೆ ತಮಿಳುನಾಡು ಒಂದರಿಂದಲೇ ಮೂರು ಲಕ್ಷಕ್ಕೂ ಮಿಗಿಲಾಗಿ ಯುವ ಜನರು ಧಾವಿಸಿ ಬರುವ ತಯಾರಿಕೆಯಲ್ಲಿದ್ದಾರೆ. ಹಾಗೂ ಕರ್ನಾಟಕ ಮಹಾರಾಷ್ಟ್ರ, ಆಂಧ್ರ ಮತ್ತು ಕೇರಳ ರಾಜ್ಯಗಳಿಂದಲೂ ಹಾಗೂ ಉತ್ತರ ಭಾರತದ ರಾಜ್ಯಗಳಿಂದಲೂ ಯುವ ಪ್ರವಾಹ ಮದರಾಸ್ ಕಡೆಗೆ ಹರಿಯಲಿವೆ.

ಸುಪ್ರೀಂಕೋರ್ಟ್ ಮಾಜಿನ್ಯಾಯಧೀಶ ಶ್ರೀ ವಿ.ಆರ್. ಕೃಷ್ಣಅಯ್ಯರ್ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಬಹಿರಂಗ ಸಭೆಯ ಭಾಷಣಕಾರರಾಗಿ ಪಶ್ಚಿಮಬಂಗಾಳ ಮತ್ತು ಕೇರಳರಾಜ್ಯಗಳ ಜನಪ್ರಿಯಮುಖ್ಯಮಂತ್ರಿಗಳಾದ ಕಾ.ಜ್ಯೋತಿಬಸು, ಇ.ಕೆ.ನಾಯನಾರ್ ಮುಂತಾದ ಗೌರವಾನ್ವಿತ ಮುಖಂಡರು ಬರುತ್ತಾರೆ.

ಡಿಸಂಬರ್ 15-19 ಈ ಐದು ದಿನಗಳು ನಡೆಯಲಿರುವಸಮ್ಮೇಳನದದಿವಸಗಳಲ್ಲಿ "ಸ್ವಾತಂತ್ರ್ಯದ 40ವರ್ಷಗಳು" ಪ್ರಜಾಸತ್ತಾತ್ಮಕ ಸಂಸ್ಕೃತಿ ಮತ್ತು ಕ್ರೀಡೆ ಮುಂತಾದ ವಿಷಯಗಳ ಮೇಲೆ ವಿಚಾರಸಂಕಿರಣ ಚರ್ಚಾಗೋಷ್ಠಿಗಳು ನಡೆಯುತ್ತವೆ. ಉಪನ್ಯಾಸಕರಲ್ಲಿ ಕಾ. ಇ.ಎಂ.ಎಸ್. ಒಬ್ಬರಾಗಿದ್ದಾರೆ.

ಡಿ.ವೈ.ಎಫ್.ಐ. ಸ್ಥಾಪನೆಯ 7 ವರ್ಷಗಳ ಅಲ್ಪಾವಧಿಯಲ್ಲಿ ಜಗತ್ತಿನ ಸುಮಾರು 15 ರಾಷ್ಟ್ರಗಳಲ್ಲಿಸಂಘಟನೆಯು ತನ್ನಸೌಹಾರ್ದಸಂಬಂಧವನ್ನು ಸ್ಥಾಪಿಸಿಕೊಂಡಿದೆ. ಲೂಧಿಯಾನ ಸಮ್ಮೇಳನದಲ್ಲಿ ಯಾರೊಬ್ಬಸೌಹಾರ್ದ ಪ್ರತಿನಿಧಿ ಇರಲಿಲ್ಲ. ಎರಡನೇಯ ಕ್ಯಾಲಿಕಟ್ ಸಮ್ಮೇಳನಕ್ಕೆ ಚೈನಾ ಮತ್ತು ಸೋವಿಯೆತ್‌ಪ್ರತಿನಿಧಿಗಳು ಭಾಗವಹಿಸಿದ್ದರು. ಮದರಾಸು ಸಮ್ಮೇಳನಕ್ಕೆ ಸಮಾಜವಾದಿ ರಾಷ್ಟ್ರಗಳು ಮತ್ತು ಅಮೇರಿಕನ್ ಮತ್ತಿತರ ಆಕ್ರಮಣ ಸಾಮ್ರಾಜ್ಯಶಾಹಿಗಳನ್ನೆದುರಿಸಿ ಜೀವನ್ಮರಣ ಹೋರಾಟದಲ್ಲಿ ನಿರತರಾಗಿರುವ ಸ್ವಾತಂತ್ರ್ಯ ಪ್ರಿಯ ಯುವ ಯೋಧ ಪ್ರತಿನಿಧಿಗಳು ಸುಮಾರು 16 ರಾಷ್ಟ್ರಗಳಿಂದ ಬರಲಿದ್ದಾರೆ. ○

ಜಾಥಾ ದೆಹಲಿಯತ್ತ ಹೊರಟಿವೆ......

[3ನೇ ಪುಟದಿಂದ]

ನಮ್ಮ ಜಾಥಾವು ಸುಮಾರು 36 ಸ್ಥಳಗಳಲ್ಲಿ ಸಣ್ಣ ಹಾಗು ದೊಡ್ಡ ಸಭೆಗಳನ್ನು ನಡೆಸಿತು. ಸುಮಾರು 10 ಸಾವಿರ ಜನರನ್ನು ನೇರವಾಗಿ ಉದ್ದೇಶಿಸಿ ಮಾತನಾಡಲಾಗಿದೆ. ಪರೋಕ್ಷವಾಗಿ ಇನ್ನಷ್ಟು ಸಾವಿರ ಜನತೆಗೆ ಜಾಥಾದ ಸಂದೇಶ ತಲುಪಿಸಲಾಗಿದೆ. ಬೆಳಗಾಂನಲ್ಲಿ ಪತ್ರಿಕಾ ಗೋಷ್ಠಿ ಮಾಡಿ ಜಾಥಾದ ಮಹತ್ವವನ್ನು ವಿವರಿಸಲಾಯಿತು. ಸ್ವಾಮೀಜಿಗಳ ಅಡ್ಡಪಲ್ಲಕ್ಕಿ ಉತ್ಸಹಕ್ಕೆ ಭಾರೀ ಪ್ರಚಾರ ಕೊಡುವ ಪತ್ರಿಕೆಗಳು ಅತ್ಯಂತ ಪ್ರಮುಖವಾದ ಈ ಜಾಥಾಕ್ಕೆ ಅಷ್ಟು ಪ್ರಚಾರ ಕೊಡದಿರುವುದು ಗಮನಿಸಬೇಕಾದ ಅಂಶ.

ಸಿ. ಪಿ. ಐ. (ಎಂ) ಮುಖಂಡರುಗಳಾದ ವಿ. ಜೆ. ಕೆ. ನಾಯರ್, ಎನ್. ಕೆ. ಉಪಾಧ್ಯಾಯ, ನಿತ್ಯಾನಂದ ಸ್ವಾಮಿ, ರೈತ ಸಂಘದ ಉಪಾಧ್ಯಕ್ಷರಾದ ಭಿಮಸೀ ಕಲಾದಗಿ, ಸಿ. ಪಿ. ಐ. ಪಕ್ಷದ ಮುಖಂಡರುಗಳಾದ ಎಂ. ಎಸ್. ಕೃಷ್ಣನ್, ಪಂಪಾಪತಿ, ಮುಧೋಳ್, ಧಾರವಾಡಕರ್,ಮೆನ್ಸಿ, ಎ. ಐ. ಎಸ್. ಎಫ್. ನ ಸಿದ್ದನಗೌಡ ಪಾಟೀಲ ಮೊದಲಾದವರು ಜಾಥಾದಲ್ಲಿ ಪ್ರಮುಖವಾಗಿ ಭಾಗವಹಿಸಿ ಮಾತನಾಡಿದರು. ಮೈಕ್ ಹಾಗೂ ಛಾಯ ಗ್ರಹಣದ ಜವಾಬ್ದಾರಿ ಹೊತ್ತಿದ್ದ ಡಿ. ವೈ. ಎಫ್. ಐ. ಕೃಷ್ಣಕಟ್ಟೆ ಅಪಾರ ಶ್ರಮವಹಿಸಿದ್ದರು. ಪಾಟೀಲರ ಹಾಡುಗಳು ಎಲ್ಲರನ್ನೂ ಧ್ವನಿ ಕೂಡಿಸುವಂತೆ ಮಾಡುತ್ತಿದ್ದವು. ಆತ್ಮೀಯ ವಾತಾವರಣದಲ್ಲಿ-ಅಭೂತ ಪೂರ್ವ ಸ್ವಾಗತದೊಂದಿಗೆ ನಮ್ಮ ಜಾಥಾ 20 ರಂದು ಬೆಂಗಳೂರನ್ನು ತಲುಪಿತು.

17 ಬೇಡಿಕೆಗಳ ಬದಲಿ ಧೋರಣೆಗಾಗಿ ನಮ್ಮ ಹೋರಾಟವನ್ನು ಬಲಪಡಿಸೋಣ. ಡಿ. 9 ದೆಹಲಿ ಚಲೋ ಯಶಸ್ವಿಗೊಳಿಸೋಣ.

ಆರ್. ಜಯಕುಮಾರ್

○

ಕುಂದಾಪುರ

ನವಂಬರ್ 16ರಂದು ಮಂಗಳೂರಿನಿಂದ ಹೊರಟ ಉಪಜಾಥಾ ಸಂಜೆ 6 ಗಂಟೆಗೆ ಕುಂದಾಪುರ ತಲುಪಿದಾಗ ರೈತ ಕಾರ್ಮಿಕ, ವಿದ್ಯಾರ್ಥಿ-ಯುವಜನರ ಭವ್ಯ ಸ್ವಾಗತ ಬಯಸಿ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆನಡೆಯಿತು. ಸಿ.ಪಿ.ಐ.(ಎಂ) ರಾಜ್ಯ ಸೆಕ್ರಟಾರಿಯೆಟ್ ಸದಸ್ಯರಾದ ಕಾ. ಸಿ. ನಂಜುಂಡಪ್ಪ, ಕೆ. ಆರ್. ಶ್ರೀಯಾನ್, ಅಬ್ರಹಾಂ ಕರ್ಕಡ, ಸಿ.ನಾರಾಯಣ, ಕೆ.ಶಂಕರ್,ಡೆವೀಡ್‌ಕರ್ಕಡ,ಯುವಜನ ಮುಖಂಡ ಮಹಾಬಲವಡೇರ ಹೋಬಳಿ ವಿದ್ಯಾರ್ಥಿ ಮುಖಂಡ ಸುನೀಲ್ ನಟೇಕರ್‌ರವರುಗಳು ಹಾಗೂ ಸಿ.ಪಿ.ಐ.ನ ಪಿ.ರಾಮನ್, ಬಿ. ಕೆ. ಸುಂದರೇಶನ್, ರಾಜೇಂದ್ರಕುಮಾರ್, ಕೃಷ್ಣ, ಹವಿಾದ್,ಕೃಷ್ಣಪ್ಪರವರುಗಳು ಜಾಥಾದ ಮುಂದಾಳತ್ವ ವಹಿಸಿದರು. ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾ॥ ಅಬ್ರಹಾಂಕರ್ಕಡರವರು ವಹಿಸಿದ್ದರು. ಜನ ಸಾಮಾನ್ಯರ ಬೇಡಿಕೆಗಳಿಗಾಗಿ ಕೋಮು ಸಾಮರಸ್ಯ, ದೇಶದ ಐಕ್ಯತೆ ಸಮಗ್ರತೆಗಳ ರಕ್ಷಣೆ, ಭ್ರಷ್ಟಾಚಾರಿ ರಾಜೀವ್ ಗಾಂಧಿಸರ್ಕಾರ ರಾಜೀನಾಮೆ ನೀಡಿ, ಮಧ್ಯಂತರ ಚುನಾವಣೆ ನಡೆಸಬೇಕೆಂಬ 17ಅಂಶಗಳ ಬೇಡಿಕೆಗಳನ್ನು ಭಾಷಣಕಾರರು ಜನರಿಗೆ ವಿವರಿಸಿ ಡಿಸಂಬರ್ 9ರ ಚಾರಿತ್ರಿಕ 'ದೆಹಲಿ ಚಲೋ' ಯಶಸ್ವಿಗೊಳಿಸಲು ಕರೆ ನೀಡಿದರು. ಕಾ॥ಸಿ.ನಾರಾಯಣ ಸ್ವಾಗತಿಸಿ ಕಾ॥ ಯು.ದಾಸಭಂಡಾರಿಯವರು ಧನ್ಯವಾದವಿತ್ತರು.

ಗುಲ್ಬರ್ಗಾ

ನವಂಬರ್ 15 ರಂದು ಇಲ್ಲಿಂದ ಹೊರಟ ಮಜ್ದೂರ್-ಕಿಸಾನ್ ಜಾಥಾದ ನೇತೃತ್ವವನ್ನು ಸಿ.ಪಿ.ಐ.(ಎಂ) ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಾದ ಕಾ।ಎನ್.ಕೆ.ಉಪಾಧ್ಯಾಯ, ರಾಜ್ಯ ಸಮಿತಿ ಸದಸ್ಯರಾದ ಕಾ.ಚಂದ್ರಶೇಖರ ಬಾಳೆ, ಕಲ್ಲಪ್ಪ ಕಿರಣಗಿ, ಸಿ.ಪಿ.ಐ.ನ ಶಾಸಕ ಕಾ.ಭೂಪತಿ ಮುಂತಾದವರು ವಹಿಸಿದ್ದರು. ಈ ಜಾಥವನ್ನು ಸಿ.ಐ.ಟಿ ಯು.ವಿನ ಎಂ.ಎಸ್.ಕೆ.ಮಿಲ್ಸ್‌ನ ಕಾರ್ಮಿಕರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ನೌಕರರು ಬಾಪುನಗರದ ನಾಗರೀಕರು ಮಾಲಾರ್ಪಣೆಮಾಡಿ ಅದ್ದೂರಿ ಸ್ವಾಗತ ಮಾಡಿದರ.

ಹೆಚ್ಚುತ್ತಿರುವ ನಿರುದ್ಯೋಗ,ಕೈಗಾರಿಕೆ ಮುಚ್ಚಳ, ಕೋಮುಗಲಭೆ, ರೈತರ ಸಮಸ್ಯೆ, ಶಿಕ್ಷಣನೀತಿ, ದಿನ ದಿನಕ್ಕೆ ಹದಗೆಡುತ್ತಿರುವ ಆರ್ಥಿಕ ಬಿಕ್ಕಟ್ಟು ಮುಂತಾದ ಜನ ವಿರೋಧಿ ನೀತಿ ಅನುಸರಿಸುತ್ತಿರುವ ರಾಜೀವ್ ಗಾಂಧಿ ರಾಜೀನಾಮೆನೀಡಿ ಮಧ್ಯಂತರ ಚುನಾವಣೆ ನಡೆಸಬೇಕೆಂದು ಭಾಷಣಕಾರರು ಒತ್ತಾಯಿಸಿದರು.

ಗುಲ್ಬರ್ಗಾದಿಂದ ಹೊರಟ ಜಾಥ ಸೇಡಂ,ವಾಡಿ, ಶಹಾಬಾದ್, ಜೇವರ್ಗಿ ಶಹಾಪುರ, ಸೊರಪೂರ, ಮಾರ್ಗವಾಗಿ ರಾಯಚೂರು ತಲುಪಿ ಅಲ್ಲಿಂದ ನವಂಬರ್ 20 ರಂದು ಬೆಂಗಳೂರು ತಲುಪಿತು.

(ಜಾಥಾ ಹೈದರಾಬಾದಿನಲ್ಲಿ)

(4ನೇ ಪುಟದಿಂದ)

ಎಡ ಪಕ್ಷಗಳಿಗೆ ಎಂದೂ ಸಿಕ್ಕದ ಅಭೂತಪೂರ್ವ ಸ್ವಾಗತವನ್ನು ತಮಿಳುನಾಡಿನಜನತೆ ಕೊಟ್ಟದ್ದಾರೆ. ಜಾಥಾದ ಅಂಗವಾಗಿ ಭಾರಿ ಬಹಿರಂಗ ಸಭೆಯಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು. ಯುವಜನರು ಆವೇಶದಿಂದ ಸ್ವಾಗತ ಮಾಡಲು ಬಂದಿದ್ದು ತಮಿಳುನಾಡಿನ ಎಡಪಕ್ಷಗಳ ನೇತಾರರಿಗೆ ಹೊಸಬಂದು ಉತ್ಸಾಹ ಸ್ಫೂರ್ತಿ ಈ ಜಾಥಾದಿಂದ ಸಿಕ್ಕಿತು. ಗ್ರಾಮಾಂತರ ಪ್ರದೇಶಗಳಲ್ಲಿ ಬದುಕುತ್ತಿರುವ ದಾರಿದ್ರ್ಯ ಜನರು, ಕೃಷಿಕೂಲಿಕಾರರು, ಬಡರೈತರು 'ಈ ಯುಗದ ಹೊಸ' ಸಂದೇಶ ಬಂದಾದಂತೆ ಈ ಜಾಥಾದ ಬಾವುಟದ ಜೊತೆಯಲ್ಲಿ ಸೇರಿಕೊಂಡರು.

ಚುನಾವಣೆಯ ಸಮಯದಲ್ಲಿ ಬರುತ್ತಿದ್ದ ರಾಜಕೀಯ ಮುಖಂಡರನ್ನು ಕಂಡು ಪರಿಚಯವಿರುವ ತಮಿಳುನಾಡಿನ ಜನತೆಗೆ, ಚುನಾವಣೆಯಲ್ಲದೆ ಅವರ ಹತ್ತಿರ ಸಂಕಷ್ಟ ದುಃಖ ದುಮ್ಮಾನಗಳ ಹಂಚಿಕೊಳ್ಳುವ ರಾಜಕೀಯ ಕಾರ್ಯಕರ್ತರು ಬಂದಿದ್ದು ಈ ಜನತೆಗೆ ಹೊಸ ಒಂದು ಅನುಭವವಾಯಿತು. ○

ರಾಯಿ ಗ್ರಾಮ ಸಭೆ

ಬಂಟ್ವಾಳ ತಾಲ್ಲೋಕು ರಾಯಿ ಗ್ರಾಮದ ಬೀಡಿ ಕಾರ್ಮಿಕರ ಸಭೆ ನೀಲಯ ಪೂಜಾರಿ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ದ.ಕ, ಕಾರ್ಯದರ್ಶಿ ಕಾ। ಯು. ಬಿ. ಲೋಕಯ್ಯ ಮಾತನಾಡಿ ಕಂಟ್ರಾಕ್ಟ್ ಪದ್ಧತಿಯನ್ನೂ ರದ್ದುಗೊಳಿಸಲು, ಶೇ. 20./. ಬೋನಸ್ಸು, ಎರೆ ಅವರೇಜ್ ದಂಡ ವಸೂಲಿ ವಿರೋಧಿಸಿ, ಕನಿಷ್ಟ ಕೂಲಿ ಜಾರಿಗೆ ತರಬೇಕು ಮುಂತಾದ ಬೇಡಿಕೆಗಳಿಗಾಗಿ ಹೋರಾಟ ನಡೆಸಲು ಸಿದ್ಧರಾಗಬೇಕೆಂದರು ನಂತರ ಕಾ॥ ಸಂಜೀವ ಬಂಗೇರ ಮಾತನಾಡಿದರು. ಕಾ। ರಮೇಶ ಶೆಟ್ಟಿ, ದಾರೀಜ ಮತ್ತು ಹೇಮಾವತಿಯವರು ಕಾರ್ಯದರ್ಶಿಗಳಾಗಿರುವ 19 ಮಂದಿಯ ಘಟಕ ರಚಿಸಲಾಯಿತು.

ಅಖಿಲ ಭಾರತ ಮುಷ್ಕರಕ್ಕೆ ಸಕ್ಕರೆ ಕಾರ್ಮಿಕರ 2ನೇ ಸಮ್ಮೇಳನದ ಕರೆ

ಅಖಿಲ ಭಾರತ ಸಕ್ಕರೆ ಕಾರ್ಮಿಕರಸಮನ್ವಯ ಸಮಿತಿ ಎರಡನೇಯ ಸಮ್ಮೇಳನ ನವದೆಹಲಿಯ ಮಾವಲಂಕರ್ ಹಾಲ್‌ನಲ್ಲಿ ನವಂಬರ್ 5 ರಂದು ಜರುಗಿತು. ಈ ಸಮ್ಮೇಳನದಲ್ಲಿ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಹೆಚ್.ಎಂ.ಎಸ್, ಬಿ.ಎಂ.ಎಸ್, ಐ.ಎನ್.ಟಿ.ಯು.ಸಿ, ಹೆಚ್.ಎಂ.ಕೆ.ಪಿ, ಯು.ಟಿ.ಯು.ಸಿ,ಯಂತಹ ಕೇಂದ್ರ ಕಾರ್ಮಿಕ ಸಂಘಟನೆಗೆ ಸೇರಿದ ಕಾರ್ಮಿಕ ಪ್ರತಿನಿಧಿಗಳು ಹಾಗೂ ಆಂಧ್ರ, ಕರ್ನಾಟಕ ಹರಿಯಾಣಾ, ಪಂಜಾಬ್‌ನಲ್ಲಿ ರಚಿತವಾಗಿರುವ ಫೆಡರೇಷನ್ ಪ್ರತಿನಿಧಿಗಳನ್ನೊಳಗೊಂಡು ಸುಮಾರು 400 ಮಂದಿ ಭಾಗವಹಿಸಿದ್ದರು. ಇದರಲ್ಲಿ 108 ಸಿ.ಐ.ಟಿ.ಯು. ಪ್ರತಿನಿಧಿಗಳಾಗಿದ್ದರು.

ನವಂಬರ್ 4 ರಂದು ಸಮನ್ವಯ ಸಮಿತಿ ಸಭೆ ಸಂಚಾಲಕ ಕಾ. ಕಿಶೋರ್ ಪವರ್‌ರವರು ಮಂಡಿಸಿದ ಕರಡು ವರದಿಯನ್ನು ಚರ್ಚಿಸಿ ಹಲವಾರು ಸಲಹೆ ಸೂಚನೆ ನೀಡಿ ಪರಿಪೂರ್ಣಗೊಳಿಸಲಾಯಿತು. ಸಮ್ಮೇಳನದ ಅಧ್ಯಕ್ಷ ಮಂಡಳಿಯನ್ನು ಆಯ್ಕೆ ಮಾಡಲಾಯಿತು. ಕಾ.ಠಾಕೂರು ಚಂದ್ರಕಾ ಸಿಂಗ್ (ಐ.ಎನ್.ಟಿ.ಯು.ಸಿ) ಓ.ಪ್ರಕಾಶ್ ಗೌತಂ(ಬಿ.ಎಂ.ಎಸ್) ಡಿ.ಕೆ.ಪಾಂಡು (ಎ.ಐ.ಟಿ.ಯು.ಸಿ) ಸೋಹನ್‌ಲಾಲ್ ತ್ಯಾಗಿ(ಎಚ್.ಎಂ.ಕೆ.ಪಿ)ತಾರಾಸಿಂಗ್ ಸೇಠಿ (ಎಚ್. ಎಂ. ಎಸ್) ಪ್ರಥುಲ್ ಚೌದ್ರಿ(ಯು. ಟಿ. ಯು. ಸಿ) ಮತ್ತು ಕಾ॥ಕೆ.ವೈದ್ಯನಾಥನ್(ಸಿ.ಐ.ಟಿ.ಯು) ಅಧ್ಯಕ್ಷ ಮಂಡಳಿ ಕಾರ್ಯಕಲಾಪ ನಡೆಸಿತು.

ಸಮ್ಮೇಳವನ್ನುದ್ದೇಶಿಸಿ ಜಾರ್ಜ್ ಫರ್ನಾಂಡಿಸ್, ಉನ್ನೀಮಲ್‌ಪುರೋಹಿತ್, ವಿಶ್ವೇಶ್ವರತ್ಯಾಗಿ ಮತ್ತು ಹೋಮಿದಾಜಿ ಮಾತನಾಡಿದರು. ಸಂಚಾಲಕ ಕಿಶೋರ್‌ಪವರ್ ಮಂಡಿಸಿದ ವರದಿ ಮೇಲೆ ಚರ್ಚೆ ನಡೆಯಿತು. ಸಕ್ಕರೆ ಕಾರ್ಮಿಕರ ತುರ್ತು ಬೇಡಿಕೆಗಳಾದ ಎರಡನೇ ತಾತ್ಕಾಲಿಕ ಪರಿಹಾರ, 492 ಅಂಶಕ್ಕೆ ಮೇಲೆ ಒಂದು ಅಂಶಕ್ಕೆ ರೂ. 1.65 ರಂತೆ ಬದಲಿ ತುಟ್ಟಿಭತ್ಯೆ ಮತ್ತು ವೇತನ ಮಂಡಳಿಗೆ ಸಲ್ಲಿಸಿದ ಸಮಾನ ಬೇಡಿಕೆಗಳ ಅಂಗೀಕಾರ ಮುಂತಾದ ಬೇಡಿಕೆಗಳಿಗೆ ಡಿಸಂಬರ್ 19ರಂದು ಒಂದು ದಿನದ ಅಖಿಲ ಭಾರತ ಸಾಂಕೇತಿಕ ಮುಷ್ಕರನಡೆಸಲು ಹಾಗೂ ಜನವರಿ12 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲುಕರೆನೀಡುವ ನಿರ್ಣಯವನ್ನು ಸರ್ವಾನುಮತದಿಂದ ಸಮ್ಮೇಳನ ಅಂಗೀಕರಿಸಿತು. ಪ್ರಥಮ ಬಾರಿಗೆ ಸಕ್ಕರೆಕಾರ್ಖಾನೆ ಕಾರ್ಮಿಕರು ರಾಷ್ಟ್ರಮಟ್ಟದಲ್ಲಿ ನಡೆಸುವ ಮುಷ್ಕರ ದೃಢ ನಿರ್ಧಾರ ಕೈಗೊಳ್ಳುವುದರ ಮೂಲಕ ದಿಟ್ಟಹೆಜ್ಜೆಯನ್ನಿಟ್ಟಿದ್ದಾರೆ.

ಸಮ್ಮೇಳನ ಮುಕ್ತಾಯ ನಂತರ ಸಿ ಐ.ಟಿ ಯು ಪ್ರತಿನಿಧಿಗಳು ಸಭೆ ಸೇರಿಸಿಐ.ಟಿ.ಯುಗೆಸೇರಿದಅಖಿಲಭಾರತ ಮಟ್ಟದ ಸಕ್ಕರೆ ಕಾರ್ಮಿಕರ ಸಮ್ಮೇಳನವನ್ನು ಲಕ್ನೋದಲ್ಲಿ ಮುಂದಿನ ವರ್ಷದ ಫೆಬ್ರವರಿಯಲ್ಲಿ ನಡೆಸಿ ಫೆಡರೇಷನ್ ರಚಿಸಲು ತೀರ್ಮಾನಿಸಲಾಗಿದೆ.

ಕೋಟೆಕಾರ್ ಸರ್ಕಲ್ ಬೀಡಿ ಸಂಘದ ಮಹಾಸಭೆ

ನವಂಬರ್ 8 ರಂದು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್‌ನ 14 ನೇ ವಾರ್ಷಿಕ ಮಹಾಸಭೆ ಯಶಸ್ವಿಯಾಗಿ ಜರುಗಿತು. ಮೊದಲಿಗೆ ಸಿ. ಐ. ಟಿ. ಯು. ಉಪಾಧ್ಯಕ್ಷರಾದ ಕಾ॥ ಬಿ. ಮಾಧವರವರು ಮಾತನಾಡಿ ಕಾರ್ಮಿಕ ವರ್ಗ ತಮ್ಮ ನ್ಯಾಯಯುತ ಬೇಡಿಕೆಗಳಿಗೆ ಹೋರಾಟ ನಡೆಸಿದಾಗ ಸರ್ಕಾರ ಪೋಲೀಸ್ ಉಪಯೋಗಿಸುವ ಮೂಲಕ ದಮನ ಮಾಡಲಾಗುತ್ತಿದೆ. ಮತ್ತೊಂದೆಡೆ ಅಕ್ರಮ ಬೀಗ ಮುದ್ರೆ ಘೋಷಿಸುವ ಮಾಲೀಕರ ವಿರುದ್ಧ ಯಾವುದೇ ಕ್ರಮ ಜರುಗಿಸದಿರುವ ನೀತಿಯನ್ನು ಖಂಡಿಸಿದರು. ದೇಶದಾದ್ಯಂತ ಮುಚ್ಚಿರುವ 1 ಲಕ್ಷ ನಲವತ್ತು ಸಾವಿರ ಕಾರ್ಖಾನೆಗಳನ್ನು ಪ್ರಾರಂಭಿಸಿ ದುಡಿಯುವ ಜನತೆಗೆ ಕೆಲಸ ಒದಗಿಸಬೇಕೆಂದು ಒತ್ತಾಯಿಸಿದರು.

ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳಿಗೆ ಹೋರಾಟ ನಡೆಸುವ ಜೊತೆಗೆ ರಾಜಕೀಯ ಪ್ರಬುದ್ಧತೆಬೆಳೆಸಿಕೊಳ್ಳಬೇಕು. ಬೆಲೆ ಏರಿಕೆ, ನಿರುದ್ಯೋಗ, ಕಪ್ಪು ಹಣ, ಆರ್ಥಿಕ ಬಿಕ್ಕಟನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ರಾಜೀವ್‌ಗಾಂಧಿ ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ಹೋರಾಟ ನಡೆಸಬೇಕೆಂದು ಕಾ॥ ಕೆ. ಆರ್. ಶ್ರೀಯಾನ್ ಕರೆ ನೀಡಿದರು.

ಕನಿಷ್ಟ ಕೂಲಿ ಜಾರಿಗೊಳಿಸಬೇಕು. ಶೇ. 20 ಬೋನಸ್ಸು ನೀಡಬೇಕು, ರಾಜೀವ್‌ಗಾಂಧಿ ರಾಜೀನಾಮೆ ನೀಡಿ ಮಧ್ಯಂತರ ಚುನಾವಣೆ ನಡೆಸಬೇಕು, ಗ್ರಾಚ್ಯುಟಿ, ಪ್ರಾವಿಡೆಂಟ್ ಫಂಡ್‌ನ ರಶೀಧಿ ನೀಡಬೇಕು ಮುಂತಾದ ಬೇಡಿಕೆಗಳ ನಿರ್ಣಯ ಕೈಗೊಳ್ಳಲಾಯಿತು.

ಪ್ರಸಕ್ತ ಸಾಲಿಗೆ ಕಾ॥ ಕೆ. ನಾರಾಯಣ ಶೆಟ್ಟಿ (ಅಧ್ಯಕ್ಷ)ಯು.ಜನಾರ್ಧನ ನಾಯಕ್, ಕೆ. ಈಶ್ವರ (ಉಪಾಧ್ಯಕ್ಷರು), ಸುಕುಮಾರ್ (ಕಾರ್ಯದರ್ಶಿ) ಪಿ. ಬಾಬು ಆಗೋರಿ ವೇಗಸ್, ಪದ್ಮಾವತಿ (ಜೊತೆ ಕಾರ್ಯದರ್ಶಿಗಳು) ಕೆ. ಮಂಜಪ್ಪ, ಕೋಶಾಧಿಕಾರಿಯಾಗಿರುವ 36 ಜನರ ಕಾರ್ಯಕಾರಿ ಸಮಿತಿ ರಚಿಸಲಾಯಿತು.

REG No. BGW-148 MAG (2) PRB DECR 319/ 78-79

ಜಾಥಾಗಳನ್ನು ಬೆಂಬಲಿಸಿ, ಸಂಸತ್ತು ಚಲೋಗೆ ಅಣಿಯಾಗಿ

(1ನೇ ಪುಟದಿಂದ)

ಸಾಲ ಮರುಪಾವತಿಗಾಗಿಯೇ ವೆಚ್ಚವಾಗಿದೆ.

ಕಾರ್ಮಿಕರು ದಶಕಗಳ ಕಾಲ ಹೋರಾಟ ನಡೆಸಿ ಗೆದ್ದುಕೊಂಡಿರುವ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ. ಎಸ್ಮಾದಂತಹ ಕರಾಳ ಶಾಸನಗಳನ್ನು ಬಳಸಿ ಮುಷ್ಕರಗಳನ್ನು ನಿಷೇಧಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಳ ಮೇಲಿನ ದಬ್ಬಾಳಿಕೆಗಳು ನಿಂತೇ ಇಲ್ಲ. ಪರಿಶಿಷ್ಟ ಜಾತಿ ಆಯೋಗದ ಶಿಫಾರಸುಗಳನ್ನು ಕಸದ ಬುಟ್ಟಿಗೆ ಎಸೆಯಲಾಗಿದೆ. ಗ್ರಾಮಾಂತರ ಕಾರ್ಮಿಕರ ಸ್ಥಾಯೀ ಸಮಿತಿ ಕೃಷಿ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಕೇಂದ್ರೀಯ ಶಾಸನವನ್ನು ರೂಪಿಸುವಂತೆ ಸರ್ವಾನುಮತದಿಂದ ಶಿಫಾರಸು ಮಾಡಿದ್ದರೂ ಅಂತಹ ಶಾಸನ ಇನ್ನೂ ಬಂದಿಲ್ಲ.

ಅಸಂಘಟಿತ ಕೃಷಿ ಕೂಲಿಕಾರರಿಗೆ ಕನಿಷ್ಟ ವೇತನ ದೊರೆಯುತ್ತಿಲ್ಲ. ಎಲ್ಲ ಭೂ ಸುಧಾರಣೆಗಳು ಉಳುವವನಿಗೆ ಹೊಲ ದೊರಕಿಸುವಲ್ಲಿ ಸೋತಿವೆ. ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಅಲ್ಲಗಳೆಯಲಾಗಿದೆ ಮಾತ್ರವಲ್ಲ ಸತಿ ಪದ್ಧತಿಯಂತಹ ಭಯಾನಕ ಕೃತ್ಯಗಳಿಂದಲೂ ಸರಕಾರ ಎಚ್ಚೆತ್ತುಕೊಂಡಿಲ್ಲ. ವರದಕ್ಷಿಣೆ ಸಾವುಗಳು ಪ್ರತಿದಿನ ಸಂಭವಿಸುತ್ತಿವೆ. ಮಹಿಳೆಯರನ್ನು ಇಂದಿಗೂ ಎರಡನೆಯ ದರ್ಜೆ ಪ್ರಜೆಗಳಂತೆ ನಡೆಸಿಕೊಳ್ಳಲಾಗುತ್ತಿದೆ.

ಸ್ವಾತಂತ್ರ್ಯ ದೊರೆತು ನಲುವತ್ತು ವರ್ಷಗಳಾದ ಮೇಲೂ ದೇಶದಲ್ಲಿ ನಿರಕ್ಷರತೆಯ ಪ್ರಮಾಣ ಶೇಕಡ 65 ರಷ್ಟಿದೆ ಜನಸಾಮಾನ್ಯರಿಗೆ ಶಿಕ್ಷಣದ ಹಕ್ಕನ್ನು ನಿರಾಕರಿಸಲಾಗಿದೆ. ಸರಕಾರವು ನೂತನ ಶಿಕ್ಷಣ ನೀತಿಯ ಮೂಲಕ ವಿದ್ಯೆಯನ್ನು ಶ್ರೀಮಂತರ ಸೊತ್ತಾಗಿ ಪರಿವರ್ತಿಸುತ್ತಿದೆ. ನಿರುದ್ಯೋಗ ಬೃಹದಾಕಾರ ತಳೆದು ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಒಂದೇ ಸವನೆ ಏರುತ್ತಿದೆ. ಇಪ್ಪತ್ತಂಶ ಕಾರ್ಯಕ್ರಮ ಮತ್ತು ಹೊಸ ಇಪ್ಪತ್ತಂಶ ಕಾರ್ಯಕ್ರಮಗಳಲ್ಲಿ ನೀಡಲಾಗಿರುವ ಆಶ್ವಾಸನೆಗಳೆಲ್ಲ ಕಾಗದ ಪತ್ರಗಳಲ್ಲೇ ಉಳಿದುಕೊಂಡಿವೆ. ಈ ದೇಶದ ಇಪ್ಪತ್ತು ಲಕ್ಷಕ್ಕೂ ಮಿಕ್ಕಿದ ಹಳ್ಳಿಗಳಲ್ಲಿ ಇಂದಿಗೂ ಕುಡಿಯುವ ನೀರು ದೊರೆಯುತ್ತಿಲ್ಲ. ಕ್ಷಾಮ ಮತ್ತು ಪ್ರವಾಹದ ಹಾವಳಿ ನಿರಂತರವಾಗಿವೆ. ಈ ವರ್ಷವಂತೂ ಬರ ಮತ್ತು ಪ್ರವಾಹಗಳಿಂದಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಸೊತ್ತಿನ ನಷ್ಟವಾಗಿದೆಯಲ್ಲದೆ ಜಾನುವಾರುಗಳು ಸತ್ತು ಮನುಷ್ಯರು ಪ್ರಾಣ ಕಳೆದುಕೊಂಡಿದ್ದಾರೆ. ಪರಿಹಾರ ಕಾರ್ಯಕ್ರಮಗಳು ಈ ಸಮಸ್ಯೆಯ ಎಳ್ಳಷ್ಟನ್ನೂ ಬಗೆಹರಿಸಲು ವಿಫಲವಾಗಿವೆ.

ಸಂವಿಧಾನವು ರಾಜ್ಯಗಳಿಗೆ ನೀಡಿದಿರು ಹಕ್ಕುಗಳು ತೀರಾ ಅತ್ಯಲ್ಪ. ಹಾಗಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ವಿವಿಧ ಪಕ್ಷಗಳಿಗೆ ತಾವು ಜನತೆಗೆ ನೀಡಿರುವ ಆಶ್ವಾಸನೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯಗಳಿಗೆ ನೀಡಲಾಗುವ ಸಂಪನ್ಮೂಲಗಳೂ ತೀರಾ ಕಡಿಮೆ. ಕೇಂದ್ರ ರಾಜ್ಯ ಸಂಬಂಧಗಳನು ಪುನಾರಚಿಸಬೇಕೆಂಬ ಬೇಡಿಕೆಯನ್ನು ಕೇಂದ್ರ ಸರಕಾರ ನಿರಾಕರಿಸಿದೆ. ಚುನಾಣಾವ ಪದ್ಧತಿಯಲ್ಲಿ ಸುಧಾರಣೆಗಳಾಗವರುವ ಕಾರಣ ಚುನಾವಣೆಗಳಲ್ಲಿ ಹಣ ಮತ್ತು ಸ್ನಾಯುಬಲದ ಪ್ರಭಾವ ಹೆಚ್ಚಾಗುತ್ತಿದೆ. ಇದರೊಂದಿಗೆ ಅಧಿಕಾರ ಶಾಹಿಯೂ ಪಾಳೆಯಗಾರಿ ಶಕ್ತಿಗಳ ಜೊತೆಗೆ ಕೈಗೂಡಿಸುತ್ತಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ಇತ್ತೀಚೆಗೆ ದೇಶವನ್ನು ದಂಗು ಬಡಿಸಿದ ಭ್ರಷ್ಟಾಚಾರದ ಹಗರಣಗಳು ಜನತೆ ರಾಜೀವ ಗಾಂಧಿಯಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವಂತೆ ಮಾಡಿವೆ. ರಾಜೀವ್ ಸರಕಾರ ರಾಜೀನಾಮೆ ನೀಡಬೇಕೆಂಬ ಬೇಡಿಕೆ ಎಲ್ಲೆಡೆ ಕೇಳಿ ಬರುತ್ತಿದೆ.

ಇಂತಹ ಪರಿಸ್ಥಿತಿಯನ್ನು ಕೋಮುವಾದಿ ಹಾಗೂ ವಿಭಜನವಾದಿ ಶಕ್ತಿಗಳು ದುರುಪಯೋಗ ಪಡಿಸಿಕೊಳ್ಳಲು ಯತ್ನಿಸುತ್ತಿವೆ ಇತ್ತೀಚೆಗಂತೂ ಇವು ತುಂಬಾ ಚುರುಕಾಗಿವೆ. ಈ ದುಷ್ಟ ಶಕ್ತಿಗಳು ದೇಶದ ಪ್ರಜಾಪ್ರಭುತ್ವವಾದಿ ಚಳುವಳಿಯಲ್ಲಿ ಒಡಕುಂಟು ಮಾಡಲು ಪ್ರಯತ್ನಿಸುತ್ತಿರುವುದಲ್ಲದೆ ದೇಶದ ಐಕ್ಯತೆಗೂ ಗಂಡಾಂತರ ತಂದೊಡ್ಡಿವೆ. ಈ ಶಕ್ತಿಗಳು ನಮ್ಮ ದೇಶವನ್ನು ಅಸ್ಥಿರಗೊಳಿಸಲು ಕಾತರರಾಗಿರುವ ಸಾಮ್ರಾಜ್ಯಶಾಹಿಗಳ ಅಣತಿಯಂತೆ ಕೆಲಸ ಮಾಡುತ್ತಿವೆಯೆನ್ನುವುದನ್ನೂ ಗಮನಿಸಬೇಕು.

ಇಂತಹ ಹಿನ್ನೆಲೆಯಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ, ಕೋಮುವಾದಿ ಛಿದ್ರಕಾರಿ ಮತ್ತು ವಿಭಜನವಾದಿ ಶಕ್ತಿಗಳಿಗೆ ವಿರುದ್ಧ ಮತ್ತು ರಾಷ್ಟ್ರದ ಐಕ್ಯತೆಗಾಗಿ ಎಡ ಪಕ್ಷಗಳು ಕಾರ್ಯಪ್ರವೃತ್ತವಾಗಿರುವ 24 ಸಾಮೂಹಿಕ ಮತ್ತು ವರ್ಗ ಸಂಘಟನೆಗಳ ಪ್ರತಿನಿಧಿಗಳು, ದೇಶವ್ಯಾಪಿ ಆಂದೋಲನವೊಂದನ್ನು ನಡೆಸಬೇಕೆಂದೂ ಈ ಹೋರಾಟವನ್ನು ರಾಜೀವ ಗಾಂಧಿ ಸರಕಾರ ರಾಜೀನಾಮೆ ನೀಡಿ ಹೊಸ ಚುನಾವಣೆಗಳನ್ನು ನಡೆಸಬೇಕೆಂಬ ಬೇಡಿಕೆಯ ಜೊತೆಗೆ ಜೋಡಿಸಕೊಳ್ಳಬೇಕೆಂದೂ ಕರೆ ನೀಡಿವೆ. ಕೇಂದ್ರ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ಮತ್ತು ರಾಜೀವ ಸರಕಾರ ರಾಜೀನಾಮೆ ನೀಡಬೇಕೆನ್ನುವ ಕುರಿತು ದೇಶಾದ್ಯಂತ ಜಾಗೃತಿಯುಂಟುಮಾಡುವುದೇ ಈ ಆಂದೋಲನದ ಉದ್ದೇಶ ಕೋಮುವಾದಿ, ಪ್ರತಿಗಾಮಿ ಮತ್ತು ಪ್ರತ್ಯೇಕವಾದಿ ಶಕ್ತಿಗಳನ್ನು ದೂರೀಕಲಿಸುವುದೂ ಈ ಹೋರಾಟದ ಗುರಿ. ರಾಜೀವಗಾಂಧಿ ಸರಕಾರವನ್ನು ಸೋಲಿಸುವ ಸಲುವಾಗಿ ನಾವು ಎಡ ಮತ್ತು ಜಾತ್ಯತೀತ ಶಕ್ತಿಗಳ ಐಕ್ಯತೆಯನ್ನು ಸಾಧಿಸಲು ಈ ಮೂಲಕ ಪ್ರಯತ್ನಿಸುತ್ತಿದ್ದೇವೆ.

ಈ ಉದ್ದೇಶ ಸಾಧನೆಗಾಗಿ ಎಲ್ಲ ಸಾಮೂಹಿಕ ಸಂಘಟನೆಗಳನ್ನೂ ಅವುಗಳ ಮೂಲಕ ಸಮಸ್ತ ದುಡಿಯುವ ಜನ ಸಮುದಾಯವನ್ನೂ ಕಾರ್ಯಪ್ರವೃತ್ತಗೊಳಿಸಬೇಕಾದುದು ಅಗತ್ಯ ಈ ದೃಷ್ಟಿಯಿಂದ ಕನ್ಯಾಕುಮಾರಿ, ತಿರುವನಂತಪುರ, ಕಲ್ಕತ್ತಾ, ಮುಂಬಯಿ ಅಮೃತಸರ ಮತ್ತು ಹುಸೇನಿವಾಲಾಗಳಿಂದ ಆರು ಜಾಥಾಗಳು ಹೊರಟು ದೇಶದ ವಿವಿಧ ರಾಜ್ಯಗಳಲ್ಲಿ ಸಂಚರಿಸಿ ಡಿಸಂಬರ್ 8 ರಂದು ದೆಹಲಿ ಸೇರಲಿವೆ. ಡಿಸೆಂಬರ್ 9 ರಂದು ಬೃಹತ್ ಪ್ರಮಾಣದ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮಗಳನ್ನು ಸಂಪೂರ್ಣ ಯಶಸ್ವಿಗೊಳಿಸಲು ತಾವು ಸಮಸ್ತ ಶಕ್ತಿಯನ್ನೂ ಉಪಯೋಗಿಸಿ ಶ್ರಮಿಸಬೇಕಾಗಿ ನಮ್ಮ ವಿನಂತಿ. ಮಾರ್ಗ ಮಧ್ಯದಲ್ಲಿ ಜಾಥಾಗಳಿಗೆ ಸ್ವಾಗತ ನೀಡಿ, ಜಾಥಾದ ಬೇಡಿಕೆಗಳನ್ನು ಜನಪ್ರಿಯಗೊಳಿಸಿ ದೆಹಲಿ ಚಲೋ ಕಾರ್ಯಕ್ರಮದಲ್ಲಿ ಸಾವಿರ ಸಾವಿರ ಜನ ಪಾಲುಗೊಳ್ಳುವಂತೆ ಮಾಡಬೇಕೆಂದೂ ನಮ್ಮ ಕೋರಿಕೆ.

ಈ ಹೋರಾಟವು ದೇಶದ ರಾಜಕೀಯ ಸನ್ನಿವೇಶದಲ್ಲಿಮಹತ್ತರ ತಿರುವನ್ನುಂಟು ಮಾಡುವುದಲ್ಲದೆ ರಾಜೀವ ಗಾಂಧಿ ಸರಕಾರ ರಾಜೀನಾಮೆ ನೀಡಬೇಕೆಂಬ ಬೇಡಿಕೆಗೆ ಜನ ಬೆಂಬಲಗಳಿಸಿ ಕೋಮುವಾದಿ ಮತ್ತು ಪ್ರತ್ಯೇಕವಾದಿ ಶಕ್ತಿಗಳ ಹೂಟವನ್ನು ವಿಫಲಗೊಳಿಸುವುದು ಖಂಡಿತ.

ಲಕ್ಷ ಕಂಠಗಳ ಕೂಗು ದೇಶಾದ್ಯಂತ ಪ್ರತಿಧ್ವನಿಸಲಿ

(ಒಂದನೇ ಪುಟದಿಂದ)

ಸಮರಶೀಲ ಘೋಷಣೆಗಳು, ಕೆಂಪು ವಂದನೆಗಳು ಮುಗಿಲು ಮುಟ್ಟಿದವು. ಅವರಿಗೆ ಭಾರಿ ಸ್ವಾಗತ ನೀಡಲಾಯಿತು. ಸಮಯದ ಅಭಾವದಿಂದ ಇನ್ನೂ ಸುರಿಯುತ್ತಲೇ ಇದ್ದ ಮಳೆಯಿಂದಾಗಿ ಎಲ್ಲ ನಾಯಕರನ್ನು ಪರಿಚಯ ಮಾಡಿಸಿದ ನಂತರ, ಇಬ್ಬರು ಮಾತ್ರ ಭಾಷಣ ಮಾಡಲು ಸಾಧ್ಯವಾಯಿತು. ಸಿ.ಐ.ಟಿ.ಯು. ಅಖಿಲ ಭಾರತ ನಾಯಕ ಕಾ. ಚಂದ್ರಪ್ಪನ್ ಜಾಥಾವನ್ನು ಸಂಘಟಿಸಿರುವ 24 ಸಾಮೂಹಿಕ ಸಂಘಟನೆಗಳು ದೇಶದ ದುಡಿಯುವ ಜನರಲ್ಲಿ 3 ಕೋಟಿ ಜನರ ಪ್ರತಿನಿಧಿ ಸಂಘಟನೆಗಳಾಗಿದ್ದು, ಇಂತಹ ರಾಜಕೀಯ ಘೋಷಣೆಯನ್ನೆತ್ತಿರುವುದು ಇದೇ ಮೊದಲು ಎಂದರು. ರಾಜೀವ ಗಾಂಧಿಯ ಸರಕಾರದ ಆರ್ಥಿಕ ನೀತಿಗಳು, ಕೋಮುವಾದಿ ನೀತಿ, ಉಚ್ಚ ವಲಯಗಳಲ್ಲಿ ಭ್ರಷ್ಟಾಚಾರವನ್ನು ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಮೂದಲಿಸಿದ ಕಾ. ಚಂದ್ರಪ್ಪನ್ ಈ ಸರ್ಕಾರವನ್ನು ಕಿತ್ತೊಗೆಯಬೇಕೆಂದು ಕರೆ ನೀಡಿದರು. ಮೂದಲಿಕೆಯ ಕಟ್ಟು ಶಬ್ದಗಳಲ್ಲಿ ಮಲಯಾಳಂನಲ್ಲಿ ಮಾತನಾಡಿದ ಅವರ ಭಾಷಣಕ್ಕೆ ಸಭಿಕರಿಂದ ಉತ್ಸಾಹದ ಪ್ರತಿಕ್ರಿಯೆ ದೊರಕಿತು. ಡಿಸೆಂಬರ್ 9ರಂದು ಪಾರ್ಲಿಮೆಂಟಿನ ಮುಂದೆ ಹತ್ತು ಲಕ್ಷ ಜನರು ರಾಜೀವ ಗಾಂಧಿಯನ್ನು ಕಿತ್ತೊಗೆಯಲು ಹಾಕುವ ಕೂಗನ್ನು ದೇಶದ ಎಲ್ಲಾ ದುಡಿಯುವ ಜನರು ಪ್ರತಿಧ್ವನಿಸುವಂತೆ ಪ್ರಚಾರ ಮಾಡಬೇಕೆಂದು ಕರೆ ನೀಡಿದರು. ಆನಂತರ ಕೇರಳದ ಆರ್.ಎಸ್.ಪಿ. ನಾಯಕ ಪದ್ಮನಾಭನ್ ದೇಶದ ಆರ್ಥಿಕ ದುಸ್ಥಿತಿ ಬಗ್ಗೆ ಅಂಕಿ ಅಂಶಗಳ ಮೂಲಕ ವಿವರಿಸಿದರು. ಕಾ. ಸೂರ್ಯನಾರಾಯಣರಾವ್ ಕರ್ನಾಟಕವಲ್ಲಿ ಜಾಥಾದ ಸಂದೇಶವನ್ನು ಪ್ರಚಾರ ಮಾಡುವಲ್ಲಿ ಸಾಕಷ್ಟು ಯಶಸ್ಸು ಸಿಕ್ಕಿದೆಯೆಂದು ವಿಶ್ಲೇಷಿಸಿ, ವಂದನಾರ್ಪಣೆ ಮಾಡಿದರು.

ವಾಮಂಜೂರು

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಮಾವೇಶ ನವಂಬರ್ 1 ರಂದು ಸಂಘದ ಅಧ್ಯಕ್ಷರಾದ ಕಾ॥ ಕೆ. ಮುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾವೇಶದಲ್ಲಿ 200 ಪ್ರತಿನಿಧಿ ಭಾಗವಹಿಸಿದ್ದರು. ಕಾರ್ಯದರ್ಶಿ ಕಾ। ಕೆ. ಗಂಗಯ್ಯನವರು ಮಾತನಾಡಿ ಬೀಡಿ ಮಜೂರರಿಗೆ ಪ್ರಾವಿಡೆಂಟ್ ಫಂಡ್ ಸರಿಯಾದ ಸಮಯಕ್ಕೆ ದೊರೆಯದಿರುವುದು, ರಶೀದಿ ನೀಡದಿರುವ ಸಮಸ್ಯೆಗಳು ಎದುರಾಗಿದ್ದು ಈ ಬಗ್ಗೆ ಮಜೂರರ ಹೋರಾಟ ನಡೆಸಬೇಕೆಂದು ಹೇಳಿದರು. ದ. ಕ. ಜಿಲ್ಲಾ ಸಮಾವೇಶಕ್ಕೆ ಪೂರ್ವ ಭಾವಿಯಾಗಿ ನಡೆದ ಈ ಸಮಾವೇಶದ ಪ್ರಾರಂಭದಲ್ಲಿ ಕಾ॥ ಗೋಪಾಲರವರು ಸ್ವಾಗತಿಸಿ ಕೊನೆಯಲ್ಲಿ ಕಾ॥ ಬಿ. ಕೃಷ್ಣಪ್ಪ ಧನ್ಯವಾದ ಅರ್ಪಿಸಿದರು. ಜಿಲ್ಲಾ ಸಮಾವೇಶಕ್ಕೆ 60 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ ಚಂದಾ 50 ರೂ.

ಅರ್ಧ ವಾರ್ಷಿಕ 25 ರೂ.

ಈ ವಾರ....

★ ಎಪ್ಪತ್ತು ವರ್ಷಗಳ ಹಿಂದೆ ರಷ್ಯಾದಲ್ಲಿ ಕ್ರಾಂತಿ ಸಂಭವಿಸಿ ಕಮ್ಯುನಿಸ್ಟ್ ಸರ್ಕಾರ ಸ್ಥಾಪಿತವಾದಾಗ ಉಳಿದಜಗತ್ತಿನ ರಾಷ್ಟ್ರಗಳಲ್ಲಿ ಚಳಿಜ್ವರವೇ ಉಂಟಾಗಿತ್ತು. ಇದು ತಮ್ಮ ದೇಶಗಳಲ್ಲೂ ವ್ಯಾಪಿಸೀತು ಎಂದು ಅನೇಕರಿಗೆ ಅಂಜಿಕೆ. ಕಮ್ಯುನಿಸ್ಟ್ ದೇಶವನ್ನು ಸುತ್ತುಗಟ್ಟಿ ಅದರ ಉಸಿರು ಸಿಕ್ಕಿಸಿ ಸಾಯಿಸಬೇಕೆಂದು ಪ್ರಯತ್ನವೂ ನಡೆದಿತ್ತು.

-ಸಮದರ್ಶಿ 'ಸುಧಾ' ಅಂಕಣದಲ್ಲಿ

★ ಐಲನೊಬ್ಬನ ಕಥೆ

ಇಪ್ಪತ್ತು ವರ್ಷದ ಹಿಂದೆ ಒಬ್ಬ ಮನುಷ್ಯ ನಟನಾಗಿದ್ದ ದುಷ್ಟರನ್ನು ಕೊಲ್ಲುವ ಹೀರೋ ಪಾತ್ರಗಳನ್ನು ಮಾಡುತ್ತಿದ್ದ ಇಂದಿಗೂ ಅವನ ಭ್ರಮೆಮತ್ತು ಕನಸುಗಳುಅವನನ್ನು ಬಿಡಲಿಲ್ಲ. ಸಿನೆಮಾ ಸಾಹಸವನ್ನು ನಿಜ ಜೀವನಕ್ಕೂ ಎಳೆದು ತಂದ ಈತ ರೇಗನ್ ಎಂದು ನೀವು ಊಹಿಸಿರಬಹುದು. ಈತನನ್ನು ಬಲ್ಲ ಅಮೇರಿಕನ್ನರು ತತ್ತರಿಸಿದ್ದಾರೆ. ಅಮೇರಿಕಾ ಆತಂಕಗೊಂಡಿದೆ.

-ಪಿ.ಲಂಕೇಶ್, ಲಂಕೇಶ್ ಪತ್ರಿಕೆಯಲ್ಲಿ

★ ಸುಮಾರು 60 ವರ್ಷದ ನಂತರ ಅಮೇರಿಕಾದ ಶೇರು ಮಾರುಕಟ್ಟೆಯ ಮಹಾ ಕುಸಿತ ಅಮೇರಿಕಾದ ಅರ್ಥ ವ್ಯವಸ್ಥೆಯ ಬುಡವನ್ನೇ ಅಲ್ಲಾಡಿಸಿದೆ. ಅಮೇರಿಕಾ ಬೃಹತ್ ಪ್ರಮಾಣದ ಸಾಲದ ಹೊರೆ ಹೊಂದಿತ್ತು ಮತ್ತು ಒಂದು ದೇಶ ಸಾಲ ಪಡೆದ ಹಣವನ್ನವಲಂಭಿಸಿ ಬದುಕುವುದಕ್ಕೂ ಮಿತಿ ಇದೆ ಎಂಬುದನ್ನು ಈ ಕುಸಿತ ತೋರಿಸಿಕೊಟ್ಟಿದೆ.

— ಎಂ.ವಿ. ಕಾಮತ್ 'ತರಂಗ' ದಲ್ಲಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone · 75331
Editorial and Managerial Office : L-56, K. V. Temple Street,
Editor Ramachandra Rao
Managing Editor : N. K. Upadhyaya